
# 59ನೇ
# ವಾರ್ಷಿಕ ವರದಿ
# 2019-20




SINCE 1962

DAVANGERE
URBAN CO-OPERATIVE BANK LTD.


**ದಿ ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್ ಲಿ., ದಾವಣಗೆರೆ**

ಪ್ರಧಾನ ಕಛೇರಿ : ಅಂಚೆ ಪೆಟ್ಟಿಗೆ ನಂ. 217, ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ,
ದಾವಣಗೆರೆ - 577 002

ದೂರವಾಣಿ : 272540, 272541    ಫ್ಯಾಕ್ಸ್ : 08192-230929

E-mail : ducbank@yahoo.com  website : www.ducbank.com

# ❖ ಕಾರ್ಯನಿರ್ವಾಹಕ ಮಂಡಳಿ ಸದಸ್ಯರು ❖



ಶ್ರೀ ಕೋಗುಂಡಿ ಬಕ್ಕೇಶಪ್ಪ
ಅಧ್ಯಕ್ಷರು



ಶ್ರೀ ಅಂದನೂರು ಮುಪ್ಪಣ್ಣ
ಉಪಾಧ್ಯಕ್ಷರು



ಶ್ರೀ ಬಿ.ಸಿ. ಉಮಾಪತಿ
ನಿರ್ದೇಶಕರು



ಶ್ರೀ ಮತ್ತಿಹಳ್ಳಿ ವೀರಣ್ಣ
ನಿರ್ದೇಶಕರು



ಶ್ರೀ ಪಲ್ಲಾಗಟ್ಟೆ ಶಿವಾನಂದಪ್ಪ
ನಿರ್ದೇಶಕರು



ಶ್ರೀ ಎಂ. ಚಂದ್ರಶೇಖರ್
ನಿರ್ದೇಶಕರು



ಶ್ರೀ ಟಿ.ಎಸ್. ಜಯರುದ್ರೇಶ್
ನಿರ್ದೇಶಕರು



ಶ್ರೀ ದೇವರಮನಿ ಶಿವಕುಮಾರ್
ನಿರ್ದೇಶಕರು



ಶ್ರೀ ಅಜ್ಜಂಪುರಶೆಟ್ರು ವಿಜಯಕುಮಾರ್
ನಿರ್ದೇಶಕರು



ಶ್ರೀಮತಿ ಸುರೇಖಾ ಎಂ. ಚಿಗಟೇರಿ
ನಿರ್ದೇಶಕರು



ಶ್ರೀ ಕಂಚಿಕೇರಿ ಮಹೇಶ್
ನಿರ್ದೇಶಕರು



ಶ್ರೀ ನಲ್ಲೂರು ಎಸ್. ರಾಘವೇಂದ್ರ
ನಿರ್ದೇಶಕರು



ಶ್ರೀ ಇ.ಎಂ. ಮಂಜುನಾಥ
ನಿರ್ದೇಶಕರು



ಶ್ರೀ ಎಂ. ವಿಕ್ರಮ್
ನಿರ್ದೇಶಕರು



ಶ್ರೀ ಮುಂಡಾಸ್ ವೀರೇಂದ್ರ
ಚಾರ್ಟರ್ಡ್ ಅಕೌಂಟೆಂಟ್
ವೃತ್ತಿಪರ ನಿರ್ದೇಶಕರು



ಶ್ರೀ ಮಲ್ಲಿಕಾರ್ಜುನ ಕಣವಿ
ವಕೀಲರು
ವೃತ್ತಿಪರ ನಿರ್ದೇಶಕರು



ಶ್ರೀ ಬೆಳ್ಳೂಡಿ ಮಂಜುನಾಥ
ವಿಶೇಷ ಆಹ್ವಾನಿತರು



ಶ್ರೀ ಎಂ. ದೊಡ್ಡಪ್ಪ
ವಿಶೇಷ ಆಹ್ವಾನಿತರು

# ದಿ ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್ ಲಿ., ದಾವಣಗೆರೆ



**ಶ್ರೀ ಕೋಗುಂಡಿ ಬಕ್ಕೇಶಪ್ಪ**
ಅಧ್ಯಕ್ಷರು



**ಶ್ರೀ ಅಂದನೂರು ಮುಪ್ಪಣ್ಣ**
ಉಪಾಧ್ಯಕ್ಷರು

ಸನ್ಮಾನ್ಯ ಸಹಕಾರಿ ಬಂಧುಗಳೇ

ನಮ್ಮ ಬ್ಯಾಂಕಿನ 59ನೇ ವಾರ್ಷಿಕ ವರ್ಚ್ಯುವಲ್ ಮಹಾಸಭೆಗೆ ತಮ್ಮೆಲ್ಲರನ್ನು ಬ್ಯಾಂಕಿನ ಕಾರ್ಯನಿರ್ವಾಹಕ ಮಂಡಲಿ ಪರವಾಗಿ ಸ್ವಾಗತಿಸುತ್ತೇವೆ.

ರಾಷ್ಟ್ರದಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗವು ವ್ಯಾಪಕವಾಗಿ ಹರಡುತ್ತಿರುವುದರಿಂದ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಕಲಂ 27(1)ರಲ್ಲಿ ಸಹಕಾರ ಸಂಘಗಳ ವಾರ್ಷಿಕ ಮಹಾಸಭೆಯನ್ನು ಸರ್ಕಾರದ ಆದೇಶದಂತೆ 25 ಡಿಸೆಂಬರ್ 2020ರೊಳಗೆ ನಡೆಸಲು ಅನುಮತಿ ನೀಡಿದೆ. ಈ ಬಗ್ಗೆ ರಾಜ್ಯ ಸರ್ಕಾರದ ಮಾರ್ಗಸೂಚಿಯನ್ವಯ ಬ್ಯಾಂಕಿನ ಆಡಳಿತ ಮಂಡಲಿಯು ಬದಲಾದ ಸನ್ನಿವೇಶಕ್ಕೆ ತಕ್ಕಂತೆ ಹೊಸ ತಂತ್ರಜ್ಞಾನದ ಮೂಲಕ ಬ್ಯಾಂಕಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ವರ್ಚ್ಯುವಲ್ ಮೀಟಿಂಗನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸುತ್ತಿದ್ದು, ತಾವುಗಳು ಬ್ಯಾಂಕಿನಲ್ಲಿ ನೊಂದಾಯಿಸಿರುವ ತಮ್ಮ ಮೊಬೈಲ್ ಸಂಖ್ಯೆಗೆ ಬಂದಿರುವ ಬ್ಯಾಂಕಿನ ಲಿಂಕ್‌ನ್ನು ಬಳಸುವುದರ ಮೂಲಕ ಮಾನ್ಯ ಸದಸ್ಯರು ವರ್ಚ್ಯುವಲ್ ಮಹಾಸಭೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಲು ಕೋರಿದೆ.

2019-20ನೇ ಸಾಲಿನ ವಾರ್ಷಿಕ ವರದಿ, ಲಾಭ-ನಷ್ಟ ಮತ್ತು ಅಢಾವೆ ಪತ್ರಿಕೆಗಳನ್ನು ತಮ್ಮ ಪರಿಶೀಲನೆಗಾಗಿ ಕಳುಹಿಸಲಾಗಿದೆ. ಬ್ಯಾಂಕಿನ ಆರ್ಥಿಕ ಪ್ರಗತಿಯು ನಿಮ್ಮೆಲ್ಲರ ಸಹಕಾರದಿಂದ ಪ್ರಗತಿ ಹೊಂದಿದೆ ಎಂದು ತಿಳಿಸಲು ಹರ್ಷಿಸುತ್ತೇವೆ. ಬ್ಯಾಂಕಿನ ಲಾಭವು ರೂ. 8.95 ಕೋಟಿಗೂ ಮೀರಿದ್ದು, ಕಳೆದ ಸಾಲಿಗಿಂತ ರೂ. 80 ಲಕ್ಷ ಹೆಚ್ಚಿಗೆಯಾಗಿರುತ್ತದೆ. ಠೇವಣಿಗಳು ಸುಮಾರು 376 ಕೋಟಿಗೂ ಮೀರಿದ್ದು, ಕಳೆದ ವರ್ಷಕ್ಕಿಂತ ರೂ. 46 ಕೋಟಿಯಷ್ಟು ಹೆಚ್ಚಾಗಿರುತ್ತದೆ. ಸಾಲಗಳು ರೂ. 260 ಕೋಟಿಗೂ ಮೀರಿದ್ದು ಹಿಂದಿನ ವರ್ಷಕ್ಕಿಂತ ರೂ. 35 ಕೋಟಿಯಷ್ಟು ಹೆಚ್ಚಾಗಿದೆ. ಬ್ಯಾಂಕಿನ ದುಡಿಯುವ ಬಂಡವಾಳವು ರೂ. 444 ಕೋಟಿಗೂ ಮೀರಿ ಹಿಂದಿನ ವರ್ಷಕ್ಕಿಂತ ರೂ. 51 ಕೋಟಿಯಷ್ಟು ವೃದ್ಧಿಯಾಗಿ ಬ್ಯಾಂಕ್ ಪ್ರಗತಿ ಸಾಧಿಸಿದೆ ಎಂದು ತಿಳಿಸಲು ಹೆಮ್ಮೆಯೆನಿಸುತ್ತದೆ.

ಕೊರೋನ ಸಾಂಕ್ರಾಮಿಕ ರೋಗವು ವಿಶ್ವದಾದ್ಯಂತ ಹರಡಿದ್ದು, ನಮ್ಮ ದೇಶವನ್ನು ಸಂಕಷ್ಟದ ಪರಿಸ್ಥಿತಿಗೆ ತಳ್ಳಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಅಭಿವೃದ್ಧಿ ದರವು (ಜಿ.ಡಿ.ಪಿ) ಅತ್ಯಂತ ಕನಿಷ್ಟಮಟ್ಟಕ್ಕೆ ಕುಸಿದಿದ್ದು, ಇತಿಹಾಸದಲ್ಲಿಯೇ ಅತ್ಯಂತ ಕಡಿಮೆ ಮಟ್ಟದ ಜಿ.ಡಿ.ಪಿ.ಯಾಗಿರುತ್ತದೆ. ಈ ಸಾಂಕ್ರಾಮಿಕ ರೋಗದ ಪಿಡುಗಿನ ಕಾರಣಕ್ಕಾಗಿ ತೀವ್ರವಾಗಿ ಬಾಧಿತವಾಗಿರುವ ಆರ್ಥಿಕ ಚಟುವಟಿಕೆಗಳಿಂದಾಗಿ 2020-21ನೇ ಹಣಕಾಸು ವರ್ಷದ ಉದ್ದಕ್ಕೂ ದೇಶದ ಆರ್ಥಿಕತೆಯು ಸಾಮಾನ್ಯ ಸ್ಥಿತಿಗೆ ಮರಳುವುದು ಕಷ್ಟಸಾಧ್ಯ ಎಂದು ಆರ್ಥಿಕ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಇದರಿಂದಾಗಿ ಬ್ಯಾಂಕಿಂಗ್ ಕ್ಷೇತ್ರದಲ್ಲೂ ಪ್ರಗತಿಗೆ ಹಿನ್ನಡೆಯಾಗಲಿದೆ.

ದೇಶದ ಎಲ್ಲಾ ಸಹಕಾರಿ ಬ್ಯಾಂಕುಗಳನ್ನು ಆರ್.ಬಿ.ಐ.ನ ವ್ಯಾಪ್ತಿಗೆ ತರುವ ಕೇಂದ್ರ ಸರ್ಕಾರದ ಮಹತ್ವದ ಸುಗ್ರೀವಾಜ್ಞೆಗೆ ರಾಷ್ಟ್ರಪತಿಗಳು ಇತ್ತೀಚೆಗೆ ತಮ್ಮ ಅಂಕಿತ ಹಾಕಿದ್ದಾರೆ. ಇದು ತಮ್ಮೆಲ್ಲರಿಗೂ ತಿಳಿದ ವಿಷಯವಾಗಿದೆ. ಸುಗ್ರಿವಾಜ್ಞೆಯಿಂದಾಗಿ ರಿಸರ್ವ್ ಬ್ಯಾಂಕ್ ಈಗ ಶೆಡ್ಯೂಲ್ಡ್ ಬ್ಯಾಂಕುಗಳ ಮೇಲೆ ಯಾವ ರೀತಿಯ ಅಧಿಕಾರಗಳನ್ನು ಹೊಂದಿದೆಯೋ ಅದು ಸಹಕಾರ ಬ್ಯಾಂಕುಗಳಿಗೂ ಅನ್ವಯಿಸುತ್ತದೆ. ಇದರಿಂದಾಗಿ ಸಹಕಾರ ಬ್ಯಾಂಕುಗಳು ಹೆಚ್ಚಿನ ಸುಭದ್ರತೆಯನ್ನು ಹೊಂದಲಿವೆ.

**ನಾವುಗಳು ಸಹಕಾರ ತತ್ವ ಸಿದ್ಧಾಂತ, ಬದ್ಧತೆಗಳಲ್ಲಿ ನಂಬಿಕೆ ಇರಿಸಿ, ನಿಮ್ಮೆಲ್ಲರ ಸಹಕಾರದಿಂದ ದೃಢವಾಗಿ ಮುನ್ನಡೆಯೋಣ.**

**"ಸಾಮಾಜಿಕ ಅಂತರ ಕಾಯ್ದುಕೊಳ್ಳಿ, ಮಾಸ್ಕ್ ಧರಿಸಿ ಹಾಗೂ ಸುರಕ್ಷಿತವಾಗಿರಿ"**

ಕಾರ್ಯನಿರ್ವಾಹಕ ಮಂಡಲಿಯ ಪರವಾಗಿ

| | |
|---|---|
| ಸಹಿ/- | ಸಹಿ/- |
| **ಕೋಗುಂಡಿ ಬಕ್ಕೇಶಪ್ಪ** | **ಅಂದನೂರು ಮುಪ್ಪಣ್ಣ** |
| ಅಧ್ಯಕ್ಷರು | ಉಪಾಧ್ಯಕ್ಷರು |

# ದಿ ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್ ಲಿ., ದಾವಣಗೆರೆ

## 59ನೇ ವಾರ್ಷಿಕ ಮಹಾಸಭೆಯ ನೋಟೀಸ್

ಬ್ಯಾಂಕಿನ 2019-2020ನೇ ಸಾಲಿನ ವಾರ್ಷಿಕ ಮಹಾಸಭೆಯ ವರ್ಚ್ಯುವಲ್ ಮೀಟಿಂಗನ್ನು ವೀಡಿಯೋ ಕಾನ್ಫರೆನ್ಸ್ / ವೆಬ್‌ಕಾಸ್ಟ್ ಮೂಲಕ ದಿನಾಂಕ 12-12-2020ನೇ ಶನಿವಾರದಂದು ಬೆಳಿಗ್ಗೆ 11-30 ಘಂಟೆಗೆ ಕರೆಯಲಾಗಿದೆ. ಮಾನ್ಯ ಸದಸ್ಯರು ಬ್ಯಾಂಕಿನಲ್ಲಿ ನೊಂದಾಯಿಸಿರುವ ತಮ್ಮ ಮೊಬೈಲ್ ಸಂಖ್ಯೆಗೆ ಬ್ಯಾಂಕಿನಿಂದ ಕಳುಹಿಸಿರುವ ಲಿಂಕ್‌ನ್ನು ಸಕಾಲಕ್ಕೆ ಬಳಸಿಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ವರ್ಚ್ಯುವಲ್ ಸಭೆಯನ್ನು ಯಶಸ್ವಿಗೊಳಿಸಲು ಕೋರಲಾಗಿದೆ.

## ಸಭೆಯ ಕಾರ್ಯಸೂಚಿ

ಪ್ರಾರ್ಥನೆ

1. ದಿನಾಂಕ 14-09-2019 ರಂದು ನಡೆದ 58ನೇ ವಾರ್ಷಿಕ ಮಹಾಸಭೆಯ ನಿರ್ಣಯಗಳನ್ನು ಓದಿ ದೃಢೀಕರಿಸುವುದು.
2. ಕಾರ್ಯನಿರ್ವಾಹಕ ಮಂಡಲಿಯವರು ತಯಾರಿಸಿರುವ 59ನೇ ವಾರ್ಷಿಕ ವರದಿಯನ್ನು (2019-20) ಪರಿಶೀಲಿಸುವುದು.
3. ದಿನಾಂಕ 31-03-2020ಕ್ಕೆ ಅಂತ್ಯವಾಗುವ ವರ್ಷದ ಲಾಭ-ನಷ್ಟ ಮತ್ತು ಅಢಾವೆ ಪತ್ರಿಕೆ ಪರಿಶೀಲನೆ ಮತ್ತು 2019-20ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಗೆ ಕಾರ್ಯನಿರ್ವಾಹಕ ಮಂಡಲಿಯು ತಯಾರಿಸಿದ ಅನುಪಾಲನಾ ವರದಿಯ ಪರಿಗಣನೆ.
4. 2019-20ನೇ ಸಾಲಿನ ಆಯವ್ಯಯದ ಅಂದಾಜಿಗಿಂತ ಹೆಚ್ಚುವರಿ ಆದ ಖರ್ಚುಗಳನ್ನು ಒಪ್ಪುವುದು ಮತ್ತು 2020-21ನೇ ಸಾಲಿಗೆ ಆಯವ್ಯಯ ಮಂಜೂರು ಮಾಡುವುದು.
5. 2019-20ನೇ ಸಾಲಿನ ಲಾಭ ವಿಲೇವಾರಿ ಮಾಡುವುದು.
6. ನಿರ್ದೇಶಕ ಮಂಡಲಿಯು 2020-21ನೇ ಸಾಲಿಗೆ ರೂಪಿಸಿದ ಕಾರ್ಯಚಟುವಟಿಕೆಗಳನ್ನು ಅನುಮೋದಿಸುವುದು.
7. 2020-21ನೇ ಸಾಲಿಗೆ ಬ್ಯಾಂಕಿನ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕಾತಿ ಅನುಮೋದನೆ.
8. 2020-21ನೇ ಸಾಲಿಗೆ ಬಾಹ್ಯ ಮೂಲಗಳಿಂದ ಪಡೆಯಬಹುದಾದ ಸಾಲಗಳ ಗರಿಷ್ಠ ಮಿತಿಯನ್ನು ನಿಗದಿಪಡಿಸುವುದು.
9. ಬ್ಯಾಂಕಿನ ಉಪನಿಯಮಗಳ ತಿದ್ದುಪಡಿಯನ್ನು ಅನುಮೋದಿಸುವುದು.
10. ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು.

ಕಾರ್ಯನಿರ್ವಾಹಕ ಮಂಡಲಿ ಪರವಾಗಿ

ದಿನಾಂಕ : 25-11-2020

(ಡಿ.ವಿ. ಆರಾಧ್ಯಮಠ್)
ಪ್ರಧಾನ ವ್ಯವಸ್ಥಾಪಕರು

ಸೂಚನೆ : ಪ್ರಕಟಿತ ಆಸ್ತಿ-ಜವಾಬ್ದಾರಿ ತಃಖ್ತೆ ಅಥವಾ ಅದಕ್ಕೆ ಸಂಬಂಧಪಟ್ಟ ತಃಖ್ತೆಗಳ ಬಗ್ಗೆ ಇತರೆ ಯಾವುದೇ ವಿಷಯದ ಬಗ್ಗೆ ಸುಸ್ತಿದಾರರಲ್ಲದ ಸದಸ್ಯರು ಸ್ಪಷ್ಟೀಕರಣ ಬಯಸಿದಲ್ಲಿ ಸಭೆಯು ನಡೆಯುವುದಕ್ಕೆ 3 ದಿವಸ ಮುಂಚಿತವಾಗಿ ಬ್ಯಾಂಕಿಗೆ ಲಿಖಿತವಾಗಿ ತಿಳಿಸತಕ್ಕದ್ದು. ಅಧ್ಯಕ್ಷರ ಅನುಮತಿ ಮೇರೆಗೆ ಬಂದ ವಿಷಯಗಳನ್ನು ದೃಶ್ಯಮಾಧ್ಯಮದ ಸಭೆಯಲ್ಲಿ ಚರ್ಚಿಸಬಹುದಾಗಿದೆ. ನಂತರ ಬಂದ ವಿಷಯವನ್ನು ಪ್ರಸ್ತಾಪಿಸಲು ಅವಕಾಶವಿರುವುದಿಲ್ಲ.

# ದಿ ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್ ಲಿ., ದಾವಣಗೆರೆ

## 2019-20ನೇ ಸಾಲಿನ ವಾರ್ಷಿಕ ವರದಿ

**ಸನ್ಮಾನ್ಯ ಸಹಕಾರಿ ಬಂಧುಗಳೇ,**

ನಮ್ಮ ಬ್ಯಾಂಕಿನ 59ನೇ ವರ್ಷದ ಈ ವಾರ್ಷಿಕ ವರ್ಚ್ಯುವಲ್ ಮಹಾಸಭೆಗೆ ತಮ್ಮೆಲ್ಲರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, 2019-20ನೇ ಸಾಲಿನ ವಾರ್ಷಿಕ ವರದಿಯನ್ನು ತಮ್ಮ ಮುಂದೆ ಮಂಡಿಸುತ್ತೇವೆ. ನಮ್ಮ ಬ್ಯಾಂಕು ಈ ವರ್ಷವೂ ಸಹ ಠೇವಣಿ ಸಂಗ್ರಹಣೆ, ಸಾಲ ನೀಡುವಿಕೆಯಲ್ಲಿ, ದುಡಿಯುವ ಬಂಡವಾಳ, ಕಾಯ್ದಿಟ್ಟ ನಿಧಿ ಹಾಗೂ ಇತರೆ ನಿಧಿಗಳಲ್ಲಿ ಉತ್ತಮ ಪ್ರಗತಿ ಸಾಧಿಸಿದೆ ಎಂದು ಅತ್ಯಂತ ಸಂತಸದಿಂದ ತಿಳಿಸಲು ಇಚ್ಛಿಸುತ್ತೇವೆ.

### ಆರ್ಥಿಕ ಪ್ರಗತಿ

(ರೂ. ಕೋಟಿಗಳಲ್ಲಿ)

| ವಿವರಗಳು | 31-03-2020 ರೂ. | 31-03-2019 ರೂ. | ಹೆಚ್ಚುವರಿಯಾದದ್ದು ರೂ. | ಶೇಕಡವಾರು ಪ್ರಮಾಣ % |
|---|---|---|---|---|
| 1. ಷೇರು ಬಂಡವಾಳ | **10.70** | 9.81 | 0.89 | 9.07% |
| 2. ಕಾಯ್ದಿಟ್ಟ ನಿಧಿ ಹಾಗೂ ಇತರೆ ನಿಧಿಗಳು | **47.65** | 44.25 | 3.40 | 7.68% |
| 3. ಠೇವಣಿಗಳು | **376.78** | 330.33 | 46.45 | 14.06% |
| 4. ಸಾಲಗಳು | **260.24** | 225.84 | 34.40 | 15.23% |
| 5. ದುಡಿಯುವ ಬಂಡವಾಳ | **444.25** | 392.83 | 51.42 | 13.09% |
| 6. ಲಾಭ (ತೆರಿಗೆ ಹಾಗೂ ಇತರೆ ಅವಕಾಶ ಕಲ್ಪಿಸುವ ಮೊದಲು) | **8.95** | 8.15 | 0.80 | 9.82% |

**1. ಷೇರು ಬಂಡವಾಳ :**

ವರ್ಷದ ಪ್ರಾರಂಭದಲ್ಲಿದ್ದ ಷೇರು ಬಂಡವಾಳ ರೂ. 9.81 ಕೋಟಿ ಇದ್ದದ್ದು, ವರ್ಷಾಂತ್ಯಕ್ಕೆ ರೂ. 10.70 ಕೋಟಿಯಷ್ಟಾಗಿ ರೂ. 89 ಲಕ್ಷ ಸಂಗ್ರಹಣೆಯಲ್ಲಿ ಹೆಚ್ಚಾಗಿದೆ.

**2. ಕಾಯ್ದಿಟ್ಟ ನಿಧಿ ಹಾಗೂ ಇತರೆ ನಿಧಿಗಳು :**

ವರ್ಷದ ಪ್ರಾರಂಭದಲ್ಲಿ ನಿಧಿಗಳ ಮೊತ್ತವು ರೂ. 44.25 ಕೋಟಿ ಇದ್ದದ್ದು, ವರ್ಷಾಂತ್ಯಕ್ಕೆ ರೂ. 47.65 ಕೋಟಿ ಆಗಿ, ವರದಿ ಸಾಲಿನಲ್ಲಿ ರೂ. 3.40 ಕೋಟಿ ಹೆಚ್ಚಿಗೆಯಾಗಿರುತ್ತದೆ. ಇದರಿಂದಾಗಿ ಬ್ಯಾಂಕು ತನ್ನ ಸ್ವಂತ ನಿಧಿಗಳನ್ನು ಹೆಚ್ಚಿಸಿಕೊಂಡಿದೆ ಎಂದು ತಿಳಿಸಲು ಹರ್ಷಿಸುತ್ತೇವೆ.

**3. ಠೇವಣಿಗಳು :**

ಬ್ಯಾಂಕಿನ ಮೇಲೆ ಸಾರ್ವಜನಿಕರು ಮತ್ತು ಸದಸ್ಯರು ಇರಿಸಿದ ಅಪಾರ ವಿಶ್ವಾಸ ಹಾಗೂ ಬ್ಯಾಂಕು ತನ್ನ ಗ್ರಾಹಕರಿಗೆ ನೀಡುತ್ತಿರುವ ಸೇವೆಗಳಿಂದಾಗಿ, ಕಳೆದ ವರ್ಷದ ಪ್ರಾರಂಭದಲ್ಲಿದ್ದ ರೂ. 330.33 ಕೋಟಿ ಠೇವಣಿಗಳು, ವರ್ಷಾಂತ್ಯಕ್ಕೆ ರೂ. 376.78 ಕೋಟಿ ಆಗಿ, ರೂ. 46.45 ಕೋಟಿ ಹೆಚ್ಚಿಗೆಯಾಗಿರುತ್ತದೆ.

### ಶಾಖಾವಾರು ಠೇವಣಿಗಳ ವಿವರಗಳು

(ರೂ. ಕೋಟಿಗಳಲ್ಲಿ)

| ಶಾಖೆಗಳು | 31-03-2020 ರೂ. | 31-03-2019 ರೂ. | ಹೆಚ್ಚಿಗೆ / ಕಡಿಮೆ |
|---|---|---|---|
| ಪ್ರಧಾನ ಕಛೇರಿ | 141.92 | 124.36 | 17.56 |
| ಚೌಕಿಪೇಟೆ | 76.61 | 70.37 | 6.24 |
| ನರಸರಾಜ ರಸ್ತೆ | 49.43 | 40.85 | 8.58 |
| ಪಿ.ಜೆ. ಬಡಾವಣೆ | 66.05 | 57.16 | 8.89 |
| ದೇ.ಅರಸ್ ಬಡಾವಣೆ | 34.20 | 29.35 | 4.85 |
| ಹೊನ್ನಾಳಿ | 8.57 | 8.24 | 0.33 |
| ಒಟ್ಟು | **376.78** | **330.33** | **46.45** |

**4. ಸಾಲ ಮತ್ತು ಮುಂಗಡಗಳು :**

ಕಳೆದ ವರ್ಷದ ಕೊನೆಯಲ್ಲಿ ರೂ. 225.84 ಕೋಟಿ ಇದ್ದ ಸಾಲಗಳು, ಈ ಸಾಲಿನ ಅಂತ್ಯಕ್ಕೆ ರೂ. 260.24 ಕೋಟಿ ಆಗಿದ್ದು, ಹಿಂದಿನ ವರ್ಷಕ್ಕಿಂತ ರೂ. 34.40 ಕೋಟಿ ಹೆಚ್ಚಿಗೆಯಾಗಿರುತ್ತದೆ.

**ಶಾಖಾವಾರು ಸಾಲಗಳ ವಿವರಗಳು**

(ರೂ. ಕೋಟಿಗಳಲ್ಲಿ)

| ಶಾಖೆಗಳು | 31-03-2020 ರೂ. | 31-03-2019 ರೂ. | ಹೆಚ್ಚಿಗೆ / ಕಡಿಮೆ |
|---|---|---|---|
| ಪ್ರಧಾನ ಕಛೇರಿ | 114.59 | 109.12 | 5.47 |
| ಚೌಕಿಪೇಟೆ | 43.07 | 26.95 | 16.12 |
| ನರಸರಾಜ ರಸ್ತೆ | 34.71 | 29.52 | 5.19 |
| ಪಿ.ಜೆ. ಬಡಾವಣೆ | 30.54 | 29.89 | 0.65 |
| ದೇ.ಅರಸ್ ಬಡಾವಣೆ | 31.24 | 23.76 | 7.47 |
| ಹೊನ್ನಾಳಿ | 6.10 | 6.60 | -0.50 |
| ಒಟ್ಟು | **260.24** | **225.84** | **34.40** |

**5. ದುಡಿಯುವ ಬಂಡವಾಳ :**

ಹಣಕಾಸು ವರ್ಷದ ಪ್ರಾರಂಭದಲ್ಲಿ ದುಡಿಯುವ ಬಂಡವಾಳ ರೂ. 392.83 ಕೋಟಿ ಇದ್ದದ್ದು, ವರ್ಷಾಂತ್ಯಕ್ಕೆ ರೂ. 444.25 ಕೋಟಿ ಆಗಿ ರೂ. 51.42 ಕೋಟಿ ಹೆಚ್ಚಿಗೆಯಾಗಿರುತ್ತದೆ.

**6. ಸದಸ್ಯರು :**

ವರ್ಷದ ಪ್ರಾರಂಭದಲ್ಲಿದ್ದ ಬ್ಯಾಂಕಿನ ಸದಸ್ಯರ ಸಂಖ್ಯೆ 15364 ಪ್ರಸಕ್ತ ಸಾಲಿನಲ್ಲಿ ಹೊಸದಾಗಿ 321 ಜನ ಸದಸ್ಯತ್ವ ಪಡೆದಿದ್ದು, 244 ಜನ ಸದಸ್ಯತ್ವ ಹಿಂದಕ್ಕೆ ಪಡೆದಿದ್ದಾರೆ. ವರ್ಷದ ಕೊನೆಯಲ್ಲಿ ಇದ್ದ ಬ್ಯಾಂಕಿನ ಒಟ್ಟು ಸದಸ್ಯರ ಸಂಖ್ಯೆ 15441

**7. ಬ್ಯಾಂಕಿನ ಹೂಡಿಕೆಗಳು / ಸಂಚಯಗಳು :**

ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ಪ್ರಕಾರ ಹೂಡಿಕೆಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರದ ಭದ್ರತೆಗಳಲ್ಲಿ, ವಿವಿಧ ಬ್ಯಾಂಕ್‌ಗಳ ಖಾಯಂ ಠೇವಣಿಗಳಲ್ಲಿ ಹಾಗೂ ಇತರೆ ಹಣಕಾಸು ಸಂಸ್ಥೆಗಳಲ್ಲಿ ಲಾಭದಾಯಕವಾಗಿ ತೊಡಗಣೆ ಮಾಡಿದ್ದು, ವರದಿ ಸಾಲಿನಲ್ಲಿ ರೂ. 145.87 ಕೋಟಿ ಹೂಡಿಕೆ ಮಾಡಲಾಗಿದೆ. ನಗದು ಮೀಸಲು ಮತ್ತು ಶಾಸನಬದ್ಧ ಮೀಸಲು ನಿಧಿಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ನೀತಿ ನಿರ್ದೇಶನದಂತೆ ನಿರ್ವಹಣೆ ಮಾಡಲಾಗಿದೆ.

**8. ಸಾಲ ವಸೂಲಾತಿ ಮತ್ತು ಅನುತ್ಪಾದಕ ಆಸ್ತಿ ಪ್ರಮಾಣ :**

ಸದಸ್ಯರುಗಳ ಸಹಕಾರ ಮತ್ತು ಸಿಬ್ಬಂದಿ ವರ್ಗದವರ ಹಾಗೂ ಕಾರ್ಯನಿರ್ವಾಹಕ ಮಂಡಲಿಯವರ ನಿರಂತರ ಪ್ರಯತ್ನದಿಂದ ಅನುತ್ಪಾದಕ ಸಾಲಗಳ ಮತ್ತು ಕಟ್ಟು ಬಾಕಿ ಸಾಲಗಳ ವಸೂಲಾತಿ ಕಾರ್ಯವನ್ನು ಯೋಜನಾಬದ್ಧವಾಗಿ ನಡೆಸಿದ್ದರಿಂದ ಅನುತ್ಪಾದಕ ಸಾಲಗಳ ಪ್ರಮಾಣವನ್ನು ಗಣನೀಯವಾಗಿ ಕಡಿಮೆ ಮಾಡಲು ಸಾಧ್ಯವಾಗಿದ್ದು ಬ್ಯಾಂಕಿನ ಪ್ರಶಂಸಾರ್ಹ ಪ್ರಗತಿಗೆ ಕಾರಣವಾಗಿದೆ. ಕಟ್ಟುಬಾಕಿ ಪ್ರಮಾಣ ಶೇಕಡ 3.33 ರಷ್ಟಿದ್ದು ಬ್ಯಾಂಕು ಸತತವಾಗಿ 0% ನಿವ್ವಳ ಎನ್.ಪಿ.ಎ. (ಅನುತ್ಪಾದಕ ಆಸ್ತಿ) ಹೊಂದಿರುವುದು ಬ್ಯಾಂಕಿನ ಸದೃಢತೆಯನ್ನು ಪ್ರತಿಬಿಂಬಿಸುತ್ತದೆ.

**9. ಲಾಭ :**

ಪ್ರಸ್ತುತ ವರ್ಷ ಬ್ಯಾಂಕು **ರೂ. 8,94,57,085–87** ಲಾಭ ಗಳಿಸಿದ್ದು, ಶಾಖಾವಾರು ಲಾಭಗಳ ವಿವರ ಈ ಕೆಳಕಂಡಂತಿದೆ.

**ಶಾಖಾವಾರು ಲಾಭದ ವಿವರಗಳು** (ರೂ. ಕೋಟಿಗಳಲ್ಲಿ)

| ಶಾಖೆಗಳು | 31–03–2020 ರೂ. | 31–03–2019 ರೂ. | ಹೆಚ್ಚಿಗೆ / ಕಡಿಮೆ |
|---|---|---|---|
| ಪ್ರಧಾನ ಕಛೇರಿ | 3.94 | 3.50 | 0.44 |
| ಚೌಕಿಪೇಟೆ | 1.53 | 1.62 | –0.09 |
| ನರಸರಾಜ ರಸ್ತೆ | 1.56 | 1.29 | 0.27 |
| ಪಿ.ಜೆ. ಬಡಾವಣೆ | 0.94 | 0.97 | –0.03 |
| ದೇ.ಅರಸ್ ಬಡಾವಣೆ | 0.82 | 0.64 | 0.18 |
| ಹೊನ್ನಾಳಿ | 0.16 | 0.13 | 0.03 |
| **ಒಟ್ಟು** | **8.95** | **8.15** | **0.80** |

**10. 2019–20ನೇ ಸಾಲಿನ ಲಾಭ ವಿಭಾಗಣೆ :**

ಪ್ರಸ್ತುತ ವರ್ಷ ಬ್ಯಾಂಕು **ರೂ. 8,94,57,085–87** ಲಾಭ ಗಳಿಸಿದ್ದು, ಆದಾಯ ತೆರಿಗೆ ಹಾಗೂ ಇತರೆ ಅವಕಾಶಗಳನ್ನು ಕಲ್ಪಿಸಿದ ನಂತರ **ರೂ. 4,42,90,623–87** ನಿವ್ವಳ ಲಾಭ ಗಳಿಸಿದೆ. ತಮ್ಮೆಲ್ಲರ ಒಪ್ಪಿಗೆ ಪಡೆದು ನಿವ್ವಳ ಲಾಭವನ್ನು ಈ ಕೆಳಕಾಣಿಸಿದಂತೆ ವಿಂಗಡಣೆ ಮಾಡಲು ಕಾರ್ಯಕಾರಿ ಮಂಡಲಿ ನಿರ್ಣಯಿಸಿದೆ.

| ಕ್ರ. ಸಂ. | ನಿಧಿಗಳು | 31–03–2020 ರೂ. | ಲಾಭ ವಿಭಾಗಣೆ | ಲಾಭ ವಿಭಾಗಣೆ ನಂತರ ನಿಧಿಗಳು |
|---|---|---|---|---|
| 1. | ಮೀಸಲು ನಿಧಿ ಶೇ. 50 ರಂತೆ | 21,44,99,041–80 | 2,21,45,323–87 | 23,66,44,365–67 |
| 2. | ಸಹಕಾರ ಶಿಕ್ಷಣ ನಿಧಿಗೆ ಶೇ. 2 ರಂತೆ* | – | 4,42,910–00 | – |
| 3. | ಸಹಕಾರ ಅಭಿವೃದ್ಧಿ ನಿಧಿಗೆ ಶೇ. 1 ರಂತೆ* | | 2,21,460–00 | |
| 4. | ಸದಸ್ಯರ ಷೇರಿನ ಮೇಲೆ ಡಿವಿಡೆಂಡ್ ಶೇ. 15 ರಂತೆ* (ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ ಕ್ರಮವಿಡಲಾಗುವುದು) | – | 1,53,42,430–00 | – |
| 5. | ಕರಡು ಸಾಲದ ನಿಧಿಗೆ | 8,10,00,000–00 | 10,00,000–00 | 8,20,00,000–00 |
| 6. | ಕಟ್ಟಡ ನಿಧಿಗೆ | 4,50,00,000–00 | 10,00,000–00 | 4,60,00,000–00 |
| 7. | ಗುಂತಾಯಿಸಿದ ಹಣದ ಮೇಲೆ ಸವಕಳಿ ನಿಧಿ | 3,60,00,000–00 | 5,00,000–00 | 3,65,00,000–00 |
| 8. | ಗುಂತಾಯಿಸಿದ ಹಣದ ಮೇಲೆ ಏರಿಳಿತ ನಿಧಿ | 1,75,00,000–00 | 5,00,000–00 | 1,80,00,000–00 |
| 9. | ಸದಸ್ಯರ ಮರಣೋತ್ತರ ಪರಿಹಾರ ನಿಧಿ | 13,53,000–00 | 15,00,000–00 | 28,53,000–00 |
| 10. | ಉತ್ಪಾದನಾ ಆಸ್ತಿಯ ಮೇಲೆ ಘಟನಾಪೇಕ್ಷ ಬಾಧ್ಯತೆ ನಿಧಿ | 1,05,00,000–00 | – | 1,05,00,000–00 |
| 11. | ಸಿಬ್ಬಂದಿ ಸೌಕರ್ಯ ನಿಧಿ | 1,28,71,929–75 | 5,00,000–00 | 1,33,71,929–75 |
| 12. | ಸಾರ್ವಜನಿಕ ಒಳಿತು ನಿಧಿ | 14,65,000–00 | 3,28,000–00 | 17,93,000–00 |
| 13. | ಧರ್ಮ ನಿಧಿ | 61,303–23 | 2,10,500–00 | 2,71,803–23 |
| 14. | ಲಾಭಾಂಶ ಸಮನ್ವಯ ನಿಧಿ | 50,00,000–00 | – | 50,00,000–00 |
| 15. | ಕರಡು ಸಾಲದ ನಿಧಿ (ಆದಾಯ ತೆರಿಗೆ ಸೆಕ್ಷನ್ 36(1)) | 5,03,77,411–00 | – | 5,03,77,411–00 |
| 16. | ಜೂಬಿಲಿ ನಿಧಿ | 9,00,000–00 | 1,00,000–00 | 10,00,000–00 |
| 17. | ಸಿಬ್ಬಂದಿಗಳ ನಿವೃತ್ತಿ ಸಮಯದ ಗಳಿಕೆ ರಜೆ ನಗದೀಕರಣದ ಅವಕಾಶ* | – | 5,00,000–00 | – |
| | **ಒಟ್ಟು** | **47,65,27,685–78** | **4,42,90,623–87** | **50,43,11,509–65** |

* ಪಾವತಿಸಬೇಕಾದ ಬಾಬ್ತುಗಳು

**11. ಆಯ–ವ್ಯಯ :**

2020–21ನೇ ಸಾಲಿನ ಅಂದಾಜು ಆಯವ್ಯಯವನ್ನು ಮಹಾಸಭೆಯ ಮಂಜೂರಾತಿಗಾಗಿ ಮಂಡಿಸಲಾಗಿದೆ.

**12. ಡಿವಿಡೆಂಡ್ :**

ಸದಸ್ಯರ ಷೇರು ಹಣದ ಮೇಲೆ ಶೇಕಡ 15 ರಂತೆ ಡಿವಿಡೆಂಡನ್ನು ವಾರ್ಷಿಕ ಮಹಾಸಭೆಯ ಅನುಮತಿ ಪಡೆದು ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ ಕ್ರಮವಿಡಲಾಗುವುದು.

**13. ಲೆಕ್ಕಪರಿಶೋಧನೆ :**

2019–20ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಶ್ರೀ ಎನ್. ಚನ್ನಬಸವಣ್ಣ, ಚಾರ್ಟರ್ಡ್ ಅಕೌಂಟೆಂಟ್, ದಾವಣಗೆರೆ ಇವರು ಪರಿಶೋಧನೆ ಮಾಡಿ ವರದಿ ಸಲ್ಲಿಸಿರುತ್ತಾರೆ. ಬ್ಯಾಂಕು ಈ ವರ್ಷವೂ ಸಹ "ಎ" ಆಡಿಟ್ ವರ್ಗದಲ್ಲಿ ಮುಂದುವರೆದಿದೆ.

**14. ಕಾರ್ಯನಿರ್ವಾಹಕ ಮಂಡಲಿ ಸಭೆಗಳು :**

ಈ ವರ್ಷದಲ್ಲಿ ಒಟ್ಟು 12 ಕಾರ್ಯನಿರ್ವಾಹಕ ಮಂಡಲಿಯ ಸಭೆಗಳು, 14 ಉಪಸಮಿತಿ ಸಭೆಗಳು ನಡೆದು, ಈ ಸಭೆಗಳಲ್ಲಿ ಎಲ್ಲಾ ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರು ಸಕ್ರಿಯವಾಗಿ ಭಾಗವಹಿಸಿ ಬ್ಯಾಂಕಿನ ಅಭಿವೃದ್ಧಿಗೆ ಸಲಹೆ ಸೂಚನೆಗಳನ್ನು ನೀಡಿ ಸಹಕರಿಸಿರುತ್ತಾರೆ.

**15.** 2020–21ನೇ ಸಾಲಿಗೆ ಬ್ಯಾಂಕು ರೂ. 916 ಕೋಟಿಯವರೆಗೂ ಬಾಹ್ಯ ಮೂಲಗಳಿಂದ ಸಾಲಗಳನ್ನು ಪಡೆಯಲು ಅವಕಾಶವಿರುತ್ತದೆ.

**16. 2020–21ನೇ ಸಾಲಿಗೆ ಉದ್ದೇಶಿಸಿರುವ ಕಾರ್ಯಕ್ರಮಗಳು :**

* ದಾವಣಗೆರೆ ನಗರದಲ್ಲಿ ನೂತನ ಶಾಖೆಯನ್ನು ಪ್ರಾರಂಭಿಸುವುದು.
* ಠೇವಣಾತಿಗಳನ್ನು ಮತ್ತು ಸಾಲಗಳನ್ನು ಹೆಚ್ಚಿಸಿ ಬ್ಯಾಂಕಿನ ಪ್ರಗತಿಯನ್ನು ಕಾಯ್ದುಕೊಳ್ಳುವುದು.
* ಗ್ರಾಸ್ ಎನ್.ಪಿ.ಎ ಪ್ರಮಾಣವನ್ನು ಕಡಿಮೆ ಮಾಡುವುದು.
* ನಮ್ಮ ಗ್ರಾಹಕರಿಗೆ ಭಾರತ್ ಬಿಲ್ ಪೇಮೆಂಟ್ ಸಿಸ್ಟಂ (ಬಿ.ಬಿ.ಪಿ.ಎಸ್.) ಸೇವೆಯನ್ನು ಒದಗಿಸುವುದು.
* ಹಂತ ಹಂತವಾಗಿ ಶಾಖೆಗಳಲ್ಲಿ ಎ.ಟಿ.ಎಂ. ಅಳವಡಿಸುವುದು.

**ಕೃತಜ್ಞತೆಗಳು ಹಾಗೂ ಅಭಿನಂದನೆಗಳು :**

ನಮ್ಮ ಬ್ಯಾಂಕಿನ ಪ್ರಗತಿಗೆ ಸಹಕರಿಸಿದ ಮಾನ್ಯ ಸದಸ್ಯರಿಗೆ, ಗ್ರಾಹಕರಿಗೆ, ಠೇವಣಿದಾರರಿಗೆ, ಅವಿರತವಾಗಿ ಶ್ರಮಿಸುತ್ತಿರುವ ಬ್ಯಾಂಕಿನ ಸಿಬ್ಬಂದಿ ವರ್ಗದವರಿಗೂ, ಲಕ್ಷ್ಮೀ ಠೇವಣಿ ಸಂಗ್ರಹಕಾರರಿಗೂ ಬ್ಯಾಂಕಿನ ಪ್ರಗತಿಯ ಸಾಧನೆಗೆ ಸೂಕ್ತ ಮಾರ್ಗದರ್ಶನ ನೀಡುತ್ತಿರುವ ರಿಸರ್ವ್ ಬ್ಯಾಂಕ್ ಅಧಿಕಾರಿಗಳಿಗೂ, ಸಹಕಾರ ಸಂಘಗಳ ಇಲಾಖಾ ಅಧಿಕಾರಿಗಳಿಗೂ, ಸಹಕಾರ ಸಂಘಗಳ ಉಪನಿಬಂಧಕರು, ದಾವಣಗೆರೆ ಜಿಲ್ಲೆ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ, ದಾವಣಗೆರೆ ಇವರಿಗೂ, ಲೆಕ್ಕ ಪರಿಶೋಧನಾ ಇಲಾಖೆಯವರಿಗೂ, ಬ್ಯಾಂಕಿನ ಆಂತರಿಕ ಲೆಕ್ಕ ಪರಿಶೋಧನೆ ಮಾಡಿದ ಮೆ॥ ಬೆಳಗಾವಿ ಅಂಡ್ ಅಸೋಸಿಯೇಟ್ಸ್, ಚಾರ್ಟರ್ಡ್ ಅಕೌಂಟೆಂಟ್ಸ್, ದಾವಣಗೆರೆ ಹಾಗೂ ಸಕಾಲದಲ್ಲಿ ಬ್ಯಾಂಕಿನ ಶಾಸನಬದ್ಧ ಲೆಕ್ಕಪರಿಶೋಧನೆ ಮಾಡಿದ ಚಾರ್ಟರ್ಡ್ ಅಕೌಂಟೆಂಟ್‌ರಾದ ಶ್ರೀ ಎನ್. ಚನ್ನಬಸವಣ್ಣ, ದಾವಣಗೆರೆ ಇವರಿಗೂ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು, ಸಾಲ ವಸೂಲಾತಿಯಲ್ಲಿ ಸಹಕರಿಸಿದ ಮಾರಾಟಾಧಿಕಾರಿಗಳಾದ ಶ್ರೀಮತಿ ಹೆಚ್.ಆರ್. ಉಷಾ ಇವರಿಗೂ, ಕಾನೂನು ಸಲಹೆ ನೀಡುತ್ತಿರುವ ವಕೀಲರುಗಳಿಗೂ, ಬ್ಯಾಂಕಿಗೆ ಆಧಾರ ಮಾಡುವ ಸ್ಥಿರಾಸ್ತಿಗಳ ಮೌಲ್ಯಮಾಪನ ಮಾಡುತ್ತಿರುವ ಇಂಜಿನಿಯರ್‌ಗಳಿಗೂ, ಚಿನ್ನಾಭರಣಗಳ ಮೌಲ್ಯಮಾಪನ ಮಾಡುತ್ತಿರುವ ಮೌಲ್ಯಮಾಪಕರಿಗೂ, ದಾವಣಗೆರೆ ಜಿಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಒಕ್ಕೂಟದವರಿಗೂ, ಜಿಲ್ಲಾ ಸಹಕಾರ ಯೂನಿಯನ್, ದಾವಣಗೆರೆ ಇವರಿಗೂ ನಾವು ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ನಮ್ಮ ಬ್ಯಾಂಕಿನ ಹಾಲಿ ಉಪಾಧ್ಯಕ್ಷರಾಗಿದ್ದ ಹಾಗೂ ದಾವಣಗೆರೆಯ ಪ್ರಪ್ರಥಮ ಮಹಿಳಾ ನ್ಯಾಯವಾದಿಗಳು, ಹಲವಾರು ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಶ್ರೀಮತಿ ಐ. ವಸಂತಕುಮಾರಿಯವರು, ಖ್ಯಾತ ಲೆಕ್ಕಪರಿಶೋಧಕರು ಹಾಗೂ ವೃತ್ತಿಪರ ನಿರ್ದೇಶಕರಾಗಿದ್ದ ಶ್ರೀ ವಿ. ಲಿಂಗರಾಜ್‌ರವರು, ಬ್ಯಾಂಕಿನ ನಿವೃತ್ತ ಉಪ ಪ್ರಧಾನ ವ್ಯವಸ್ಥಾಪಕರಾಗಿದ್ದ ಶ್ರೀ ಪಲ್ಲಾಗಟ್ಟಿ ಕೊಟ್ರೇಶಪ್ಪನವರು, ಹಿರಿಯ ನಿವೃತ್ತ ವ್ಯವಸ್ಥಾಪಕರಾಗಿದ್ದ ಶ್ರೀ ಎಂ.ಸಿ. ದಯಾನಂದ್‌ರವರು, ಶ್ರೀ ಬಿ.ಎಂ. ಮಲ್ಲಿಕಾರ್ಜುನಪ್ಪನವರು ಹಾಗೂ ಬ್ಯಾಂಕಿನ ನಿವೃತ್ತ ಸಹಾಯಕರಾಗಿದ್ದ ಶ್ರೀಯುತ ಎನ್. ಕೊಟ್ರಪ್ಪನವರು ದೈವಾಧೀನರಾಗಿದ್ದು ಬ್ಯಾಂಕಿಗೆ ತುಂಬಲಾರದ ನಷ್ಟವಾಗಿದೆ. ದಯಾಮಯನಾದ ಭಗವಂತನು ಅವರುಗಳ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಹಾಗೂ ಅವರುಗಳ ಕುಟುಂಬ ವರ್ಗಕ್ಕೆ ದುಃಖ ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ವರದಿ ಸಾಲಿನಲ್ಲಿ ಬ್ಯಾಂಕಿನ ವ್ಯವಸ್ಥಾಪಕರಾಗಿದ್ದ ಶ್ರೀ ಬಿ.ನಾಗಭೂಷಣ್‌ರವರು ಹಾಗೂ ಹಿರಿಯ ಸಹಾಯಕರಾಗಿದ್ದ ಶ್ರೀ ಎ. ಗುರುಬಸವರಾಜ್‌ರವರು ಮತ್ತು ಸಹಾಯಕರಾಗಿದ್ದ ಶ್ರೀ ಹೆಚ್. ಮಲ್ಲಿಕಾರ್ಜುನ್‌ರವರು ನಿವೃತ್ತಿಯಾಗಿದ್ದು ಅವರುಗಳ ಸೇವೆ ಗಮನಾರ್ಹವಾಗಿರುತ್ತದೆ.

ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಕಾರಣಕರ್ತರಾದ ಎಲ್ಲರಿಗೂ ನಮ್ಮ ಅನಂತ ಧನ್ಯವಾದಗಳು

ಕಾರ್ಯನಿರ್ವಾಹಕ ಮಂಡಲಿ ಪರವಾಗಿ
ಸಹಿ/–
**ಕೋಗುಂಡಿ ಬಕ್ಕೇಶಪ್ಪ**
ಅಧ್ಯಕ್ಷರು

## 2019–20ನೇ ಸಾಲಿನ ಆಯ–ವ್ಯಯಕ್ಕಿಂತ ಹೆಚ್ಚುವರಿ ಆದ ಖರ್ಚು ಮತ್ತು 2020–21ನೇ ಸಾಲಿನ ಅಂದಾಜು ಆಯ–ವ್ಯಯ ಪತ್ರಿಕೆ

| ಕ್ರ. ಸಂ. | ವಿವರಗಳು | 2019–20ಕ್ಕೆ ಮಂಜೂರಾದ ಬಡ್ಜೆಟ್ | 2019–20ಕ್ಕೆ ಖರ್ಚು ಆದದ್ದು | ಹೆಚ್ಚುವರಿಯಾದ ಖರ್ಚು | 2020–21ನೇ ಸಾಲಿನ ಅಂದಾಜು | |
|---|---|---|---|---|---|---|
| | | | | | ಖರ್ಚು ರೂ. | ಆದಾಯ ರೂ. |
| 1. | ಸಿಬ್ಬಂದಿ ಸಂಬಳ, ಭವಿಷ್ಯ ನಿಧಿ ಮತ್ತು ಇತರೆ | 4,25,00,000–00 | 4,29,89,143–00 | 4,89,143–00 | 4,40,00,000–00 | – |
| 2. | ಮುದ್ರಣ, ಲೇಖನ ಸಾಮಗ್ರಿಗಳು ಮತ್ತು ಜಾಹಿರಾತು | 5,00,000–00 | 4,72,988–56 | – | 6,00,000–00 | – |
| 3. | ಬಾಡಿಗೆ, ಕಂದಾಯ, ವಿದ್ಯುತ್ ಮತ್ತು ವಿಮೆ | 1,00,00,000–00 | 59,90,760–25 | – | 80,00,000–00 | – |
| 4. | ಅಂಚೆ, ತಂತಿ ಮತ್ತು ದೂರವಾಣಿ | 5,00,000–00 | 1,25,409–32 | – | 3,00,000–00 | – |
| 5. | ಪ್ರವಾಸ ಭತ್ಯೆ | 2,00,000–00 | 23,020–00 | – | 2,00,000–00 | – |
| 6. | ವಾರ್ಷಿಕ ಮಹಾಸಭೆಯ ವೆಚ್ಚ | 8,00,000–00 | 8,22,789–00 | 22,789–00 | 8,00,000–00 | – |
| 7. | ನಿರ್ದೇಶಕರ ಸಭೆಯ ವೆಚ್ಚ | 3,00,000–00 | 2,87,000–00 | – | 4,00,000–00 | – |
| 8. | ತನಿಖಾ ಶುಲ್ಕ ಮತ್ತು ಮಾರಾಟಾಧಿಕಾರಿಯವರ ವೇತನ | 15,00,000–00 | 11,05,555–00 | – | 15,00,000–00 | – |
| 9. | ಬಡ್ಡಿ ಮತ್ತು ಕಮೀಷನ್ | 21,50,00,000–00 | 23,17,43,788–97 | 1,67,43,788–97 | 24,00,00,000–00 | 27,50,00,000–00 |
| 10. | ಚಂದಾ ವಗೈರೆ | 2,00,000–00 | 1,14,288–90 | – | 2,00,000–00 | – |
| 11. | ನವೀಕರಣ ಮತ್ತು ದುರಸ್ತಿ | 30,00,000–00 | 21,26,223–94 | – | 30,00,000–00 | – |
| 12. | ಸವಕಳಿ | 50,00,000–00 | 39.73.299–72 | – | 50,00,000–00 | – |
| 13. | ಕಾನೂನು ಸಲಹೆ ವೆಚ್ಚ | 5,00,000–00 | 1,60,000–00 | – | 5,00,000–00 | – |
| 14. | ಲಕ್ಷ್ಮೀ ಠೇವಣಿ ಸಂಗ್ರಹಕಾರರ ಕಮೀಷನ್ | 40,00,000–00 | 38,82,998–00 | – | 40,00,000–00 | – |
| 15. | ಇತರೆ | 40,00,000–00 | 39,10,370–09 | | 40,00,000–00 | 50,00,000–00 |
| 16. | ಕಂಪ್ಯೂಟರ್ ಮತ್ತು ಜೆರಾಕ್ಸ್ ನಿರ್ವಹಣೆ | 20,00,000–00 | 13,92,649–20 | | 30,00,000–00 | – |
| 17. | ಗುಂತಾಯಿಸಿದ ಹಣದ ಮೇಲಿನ ಆದಾಯ | – | – | | – | 10,50,00,000–00 |
| 18. | ಲಾಭ | 6,50,00,000–00 | 8,94,57,085–87 | | 6,95,00,000–00 | – |
| | **ಒಟ್ಟು** | **35,50,00,000–00** | **38,85,77,369–82** | **1,72,55,720–97** | **38,50,00,000–00** | **38,50,00,000–00** |

## ದಿ ದಾವಣಗೆರೆ ಅರ್ಬನ್ ಕೋ-ಆಪ್.

### ದಿನಾಂಕ: 31-03-2020 ಕ್ಕೆ ಇದ್ದಂತೆ

| 31-03-2019 ರೂ. ಪೈ. | ಖರ್ಚು | 31-03-2020 ರೂ. ಪೈ. |
|---|---|---|
| 20,01,22,623-43 | ಠೇವಣಿಗಳ ಮತ್ತು ತಂದ ಸಾಲಗಳ ಮೇಲೆ ಕೊಟ್ಟ ಬಡ್ಡಿ | 23,17,43,788-97 |
| 3,80,34,054-00 | ಸಂಬಳ, ಭತ್ಯೆ, ಭವಿಷ್ಯ ನಿಧಿ ಮತ್ತು ಇತರೆ | 4,29,89,143-00 |
| 1,32,500-00 | ಆಡಳಿತ ಮಂಡಳಿಯ ಸದಸ್ಯರುಗಳ ಭತ್ಯೆ | 2,87,000-00 |
| 78,05,028-00 | ಬಾಡಿಗೆ, ತೆರಿಗೆಗಳು, ವಿಮೆ ಮತ್ತು ವಿದ್ಯುಚ್ಛಕ್ತಿ ಖರ್ಚುಗಳು | 59,90,760-25 |
| 2,95,980-00 | ಕಾನೂನು ಖರ್ಚುಗಳು | 1,60,000-00 |
| 2,44,644-90 | ಅಂಚೆ, ತಂತಿ ಮತ್ತು ದೂರವಾಣಿ ಖರ್ಚು | 1,25,409-32 |
| 13,04,830-00 | ಲೆಕ್ಕ ಪರಿಶೋಧಕರ ಮತ್ತು ಮಾರಾಟಾಧಿಕಾರಿಗಳ ಸಂಬಳ | 11,05,555-00 |
| 48,25,160-08 | ಆಸ್ತಿಗಳ ಮೇಲೆ ಸವಕಳಿ ಮತ್ತು ದುರಸ್ತಿ ಖರ್ಚು | 60,99,523-66 |
| 1,47,561-76 | ಮುದ್ರಣ, ಲೇಖನ ಸಾಮಗ್ರಿಗಳು ಮತ್ತು ಜಾಹೀರಾತು | 4,68,448-56 |
| 37,02,995-00 | ಲಕ್ಷ್ಮಿ ಠೇವಣಿ ಸಂಗ್ರಹಕಾರರ ಕಮಿಷನ್ | 38,82,998-00 |
| 18,81,998-40 | ವಾರ್ಷಿಕ ಮಹಾಸಭೆಯ ಖರ್ಚು | 8,22,789-00 |
| 45,75,044-39 | ಇತರೆ ಖರ್ಚುಗಳು | 54,44,868-19 |
| **8,15,37,226-48** | **ಲಾಭ** (ಆದಾಯ ತೆರಿಗೆ ಹಾಗೂ ಇತರೆ ಅವಕಾಶಗಳಿಗೆ ವಜಾ ಮಾಡುವ ಮೊದಲು) | **8,94,57,085-87** |
| **34,46,09,646-44** | **ಜುಮ್ಲಾ** | **38,85,77,369-82** |
| | **ಆದಾಯ ತೆರಿಗೆ ಹಾಗೂ ಇತರೆ ಅವಕಾಶಗಳು**<br>1. ಆದಾಯ ತೆರಿಗೆಗೆ ಅವಕಾಶ 2,50,00,000-00<br>2. ಕರಡು ಸಾಲದ ನಿಧಿಗೆ ಅವಕಾಶ [ಆದಾಯ ತೆರಿಗೆ ಸೆ.36(1)(Viia)] 75,00,000-00<br>3. ದೀರ್ಘಾವಧಿ ಸಾಲದ ಮೇಲೆ ಬಂದಂತಹ ಆದಾಯದ ಮೇಲೆ ಅವಕಾಶ ಸೆ.36(1)(Viii)] 55,00,000-00<br>4. ಉತ್ಪಾದನಾ ಆಸ್ತಿಯ ಮೇಲೆ ಘಟನಾಪೇಕ್ಷ ಭಾದ್ಯತೆ ನಿಧಿ 15,00,000-00<br>5. ಆಡಿಟ್ ಫೀ ಪಾವತಿಯಾಗಬೇಕಾದದ್ದು 3,50,000-00<br>6. ಸಿಬ್ಬಂದಿಗೆ ಎಕ್ಸ್‌ಗ್ರೇಷಿಯಾ ಅವಕಾಶ 53,16,462-00 | |
| **3,90,36,022-00** | | **4,51,66,462-00** |
| **4,25,01,204-48** | **ನಿವ್ವಳ ಲಾಭ** | **4,42,90,623-87** |
| **8,15,37,226-48** | **ಜುಮ್ಲಾ** | **8,94,57,085-87** |

| | | |
|---|---|---|
| **ಡಿ.ವಿ. ಆರಾಧ್ಯಮಠ**<br>ಪ್ರಧಾನ ವ್ಯವಸ್ಥಾಪಕರು | **ಮುಂಡಾಸ್ ವೀರೇಂದ್ರ**<br>ಚಾರ್ಟರ್ಡ್ ಅಕೌಂಟೆಂಟ್, ನಿರ್ದೇಶಕರು | **ಕೋಗುಂಡಿ ಬಕ್ಕೇಶಪ್ಪ**<br>ಅಧ್ಯಕ್ಷರು |

**ಕಾರ್ಯನಿರ್ವಾಹಕ ಮಂಡಲಿ ಸದಸ್ಯರು :**

| | | |
|---|---|---|
| **ಮತ್ತಿಹಳ್ಳಿ ವೀರಣ್ಣ**<br>ನಿರ್ದೇಶಕರು | **ಟಿ.ಎಸ್. ಜಯರುದ್ರೇಶ್**<br>ನಿರ್ದೇಶಕರು | **ಸುರೇಖಾ ಎಂ. ಚಿಗಟೇರಿ**<br>ನಿರ್ದೇಶಕರು |

## ಬ್ಯಾಂಕ್ ಲಿ., ದಾವಣಗೆರೆ
### ಲಾಭ – ಹಾನಿ ಪತ್ರಿಕೆ

| 31-03-2019 ರೂ. ಪೈ. | ಆದಾಯ | 31-03-2020 ರೂ. ಪೈ. |
|---|---|---|
| 24,24,65,363-61 | ಸಾಲ ಮತ್ತು ಮುಂಗಡಗಳ ಮೇಲೆ ಬಂದ ಬಡ್ಡಿ | 27,83,27,537-78 |
| 9,39,53,438-78 | ವಿನಿಯೋಗಗಳ ಮೇಲೆ ಬಂದ ಆದಾಯ | 10,51,20,433-77 |
| 81,90,844-05 | ಇತರೆ ಜಮಾಗಳು | 51,29,398-27 |
| **34,46,09,646-44** | **ಜುಮ್ಲಾ** | **38,85,77,369-82** |
| **8,15,37,226-48** | ಲಾಭ ಮೇಲಿನಂತೆ | **8,94,57,085-87** |
| **8,15,37,226-48** | **ಜುಮ್ಲಾ** | **8,94,57,085-87** |

ದಿನಾಂಕ : 11-09-2020
ಸ್ಥಳ : ದಾವಣಗೆರೆ

**ಸಹಿ/-**
**ಎನ್. ಚನ್ನಬಸವಣ್ಣ**
**ಚಾರ್ಟರ್ಡ್ ಅಕೌಂಟೆಂಟ್ಸ್**
ಎಂ. ನಂ. 213853
ಮಾಲೀಕರು, ಮೆ॥ ಚನ್ನಬಸವಣ್ಣ ಅಂಡ್ ಕಂ. ದಾವಣಗೆರೆ.
ಎಫ್ಆರ್. ನಂ. 010580S

## ದಿ ದಾವಣಗೆರೆ ಅರ್ಬನ್ ಕೋ-ಆಪ್.

### ದಿನಾಂಕ: 31-03-2020 ಕ್ಕೆ ಇದ್ದಂತೆ

| 31-03-2019 ರೂ. ಪೈ. | ಬಂಡವಾಳ ಮತ್ತು ಜವಾಬ್ದಾರಿಗಳು | | 31-03-2020 ರೂ. ಪೈ. |
|---|---|---|---|
| **9,81,14,250-00** | **ಷೇರು ಬಂಡವಾಳ** | | **10,70,25,200-00** |
| | ವ್ಯಕ್ತಿಗತ ಮತ್ತು ಪಾಲುದಾರಿಕೆ ಸಂಸ್ಥೆಗಳಿಂದ ರೂ.100 ಮೌಲ್ಯದ 1070252 ಷೇರುಗಳು | | |
| **44,24,95,278-30** | **ಆಪದ್ಧನ ಮತ್ತು ಇತರೆ ನಿಧಿಗಳು** | | **47,65,27,685-78** |
| **42,75,82,584-32** | | **45,98,76,452-80** | |
| 17,69,05,173-32 | ಆಪದ್ಧನ ನಿಧಿ | 21,44,99,041-80 | |
| 4,30,00,000-00 | ಕಟ್ಟಡ ನಿಧಿ | 4,50,00,000-00 | |
| 46,00,000-00 | ಲಾಭಾಂಶ ಸಮನ್ವಯ ನಿಧಿ | 50,00,000-00 | |
| 10,00,00,000-00 | ಕರಡು ಸಾಲದ ನಿಧಿ | 8,10,00,000-00 | |
| 4,28,77,411-00 | ಕರಡು ಸಾಲದ ನಿಧಿ (ಆದಾಯ ತೆರಿಗೆ ಸೆಕ್ಷನ್ 36(1)(Viia) | 5,03,77,411-00 | |
| 3,50,00,000-00 | ಗುಂತಾಯಿಸಿದ ಹಣದ ಮೇಲೆ ಸವಕಳಿ ನಿಧಿ | 3,60,00,000-00 | |
| 1,62,00,000-00 | ಗುಂತಾಯಿಸಿದ ಹಣದ ಮೇಲೆ ಏರಿಳಿತ ನಿಧಿ | 1,75,00,000-00 | |
| 90,00,000-00 | ಉತ್ಪಾದನಾ ಆಸ್ತಿಯ ಮೇಲೆ ಘಟನಾಪೇಕ್ಷ ಬಾಧ್ಯತೆ ನಿಧಿ | 1,05,00,000-00 | |
| **1,49,12,693-98** | **ಇತರೆ ನಿಧಿಗಳು ಮತ್ತು ಕಾಯ್ದಿರಿಸಿದ ನಿಧಿಗಳು** | **1,66,51,232-98** | |
| 1,19,56,869-75 | ಸಿಬ್ಬಂದಿ ಸೌಕರ್ಯನಿಧಿ | 1,28,71,929-75 | |
| 14,00,000-00 | ಸಾರ್ವಜನಿಕ ಒಳಿತು ನಿಧಿ | 14,65,000-00 | |
| 1,44,824-23 | ಧರ್ಮನಿಧಿ | 61,303-23 | |
| 9,61,000-00 | ಸದಸ್ಯರ ಮರಣೋತ್ತರ ಪರಿಹಾರ ನಿಧಿ | 13,53,000-00 | |
| 4,50,000-00 | ಜುಬಿಲೀ ನಿಧಿ | 9,00,000-00 | |
| **330,32,59,119-16** | **ಠೇವಣಿಗಳು ಮತ್ತು ಇತರೆ ಖಾತೆಗಳು** | | **376,78,14,046-58** |
| **247,54,82,448-20** | **ಖಾಯಂ ಠೇವಣಿಗಳು** | **297,18,05,917-25** | |
| 234,21,22,227-20 | ವ್ಯಕ್ತಿಗಳಿಂದ | 275,39,18,629-25 | |
| 13,33,60,221-00 | ಇತರೆ ಸಂಸ್ಥೆಗಳಿಂದ | 21,78,87,288-00 | |
| **59,86,62,307-90** | **ಉಳಿತಾಯ ಠೇವಣಿಗಳು** | **59,50,25,401-30** | |
| 59,84,42,952-70 | ವ್ಯಕ್ತಿಗಳಿಂದ | 59,46,76,284-10 | |
| 2,19,355-20 | ಇತರೆ ಸಂಸ್ಥೆಗಳಿಂದ | 3,49,117-20 | |
| **22,79,02,075-83** | **ಚಾಲ್ತಿ ಠೇವಣಿಗಳು** | **19,97,70,850-88** | |
| 22,45,26,144-15 | ವ್ಯಕ್ತಿಗಳಿಂದ | 19,93,41,840-12 | |
| 33,75,931-68 | ಇತರೆ ಸಂಘಗಳಿಂದ | 4,29,010-76 | |
| **12,12,287-23** | **ಇತರೆ ಠೇವಣಿಗಳು** | **12,11,877-15** | |
| 12,12,287-23 | ವಾಯಿದೆ ಮೀರಿದ ಠೇವಣಿ | 12,11,877-15 | |
| 0-00 | **ಪಡೆದ ಸಾಲಗಳು** | | 0-00 |
| - | ಅಲ್ಪಾವಧಿ ಸಾಲಗಳು | - | |
| - | ಮಧ್ಯಮಾವಧಿ ಸಾಲಗಳು | - | |
| **34,220-00** | **ವಸೂಲಾಗತಕ್ಕ ಮತ್ತು ವಸೂಲಿಗೆ ಬಂದಿರುವ ಬಿಲ್ಲುಗಳು** | | **0-00** |
| **30,12,167-00** | **ಶಾಖೆಗಳ ಹೊಂದಾಣಿಕೆ** | | **0-00** |
| **6,16,66,032-10** | **ಕಟ್ಟುಬಾಕಿ ಬಡ್ಡಿ ಮೀಸಲು** | | **6,32,87,148-89** |
| **21,95,438-89** | **ಕೊಡಬೇಕಾದ ಬಡ್ಡಿ** | | **22,97,639-89** |
| **391,07,76,505-45** | **ಮುಂದಿನ ಪುಟಕ್ಕೆ** | | **441,69,51,721-14** |

## ಬ್ಯಾಂಕ್ ಲಿ., ದಾವಣಗೆರೆ

### ಅಢಾವೆ ಪತ್ರಿಕೆ

| 31-03-2019 ರೂ. ಪೈ. | ಸ್ವತ್ತು ಮತ್ತು ಆಸ್ತಿ | | 31-03-2020 ರೂ. ಪೈ. |
|---|---|---|---|
| **24,58,01,104-27** | **ನಗದು ಮತ್ತು ಇತರೆ ಬ್ಯಾಂಕಿನಲ್ಲಿರುವ ಶಿಲ್ಕು** | | **27,03,48,980-85** |
| 3,59,81,484-00 | ಬ್ಯಾಂಕಿನಲ್ಲಿರುವ ನಗದು | 3,26,23,549-00 | |
| | ಎಸ್.ಬಿ.ಐ ಮತ್ತು ಇತರೆ ಸಮವರ್ತಿ ಬ್ಯಾಂಕುಗಳಲ್ಲಿ ಹಾಗೂ ಕೆ.ಎಸ್.ಸಿ. ಅಪೆಕ್ಸ್ ಬ್ಯಾಂಕ್ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಲ್ಲಿ | | |
| 3,23,76,416-27 | ಚಾಲ್ತಿ ಖಾತೆ | 6,02,82,227-85 | |
| 17,74,43,204-00 | ಖಾಯಂ ಠೇವಣಿ | 17,74,43,204-00 | |
| **38,90,18,238-68** | **ಇತರೆ ಬ್ಯಾಂಕಿನಲ್ಲಿ ಶಿಲ್ಕು** | | **55,45,34,780-77** |
| 16,95,23,238-68 | ಚಾಲ್ತಿ ಖಾತೆ | 22,45,39,780-77 | |
| 21,94,95,000-00 | ಖಾಯಂ ಠೇವಣಿ | 32,99,95,000-00 | |
| 0-00 | ಕಾಲ್‌ಮನಿ ಹೂಡಿಕೆ | | 0-00 |
| **97,13,57,962-00** | **ಸಂಚಯಗಳು** | | **95,12,47,555.00** |
| **71,11,55,462-00** | ಕೇಂದ್ರ/ರಾಜ್ಯ ಸರ್ಕಾರದ ಭದ್ರತಾ ಪತ್ರಗಳು | **68,10,45,055.00** | |
| 71,11,55,462-00 | ಪುಸ್ತಕ ಬೆಲೆ | 68,10,45,055-00 | |
| 71,00,00,000-00 | ಮುಖಬೆಲೆ | 68,00,00,000-00 | |
| 70,35,89,000-00 | ಮಾರುಕಟ್ಟೆ ಬೆಲೆ | 69,30,72,000-00 | |
| **2,02,500-00** | ಸಹಕಾರಿ ಸಂಘಗಳ ಷೇರುಗಳು | **2,02,500-00** | |
| **26,00,00,000-00** | ಇತರೆ | **27,00,00,000-00** | |
| **225,83,91,717-27** | **ಸಾಲ ಮತ್ತು ಮುಂಗಡಗಳು** | | **260,24,47,665-48** |
| **108,82,50,522-97** | **ಅಲ್ಪಾವಧಿ ಸಾಲಗಳು ರೋಖ ಪತ್ರಗಳು ಓವರ್ ಡ್ರಾಫ್ಟ್‌ಗಳು** | **127,29,29,750-81** | |
| 107,51,77,717-27 | ಬಿಲ್ಲುಗಳು ಸೋಡಿ ಅವುಗಳಲ್ಲಿ ವಾಸ್ತವಿಕ ಭದ್ರತೆಗಳ ಮೇಲೆ | 126,15,65,750-81 | |
| 108,82,50,522-97 | ಅವುಗಳಲ್ಲಿ ವ್ಯಕ್ತಿಗಳಿಂದ ಬರಬೇಕಾದ ಬಾಕಿ | 127,29,29,750-81 | |
| 2,04,16,457-00 | ಅವುಗಳಲ್ಲಿ ಸುಸ್ತಿಯಾದ ಬಾಕಿ | 6,72,61,709-00 | |
| **18,94,83,442-82** | **ಮಧ್ಯಮಾವಧಿ ಸಾಲಗಳು** | **11,69,74,675-66** | |
| 18,94,83,442-82 | ಅವುಗಳಲ್ಲಿ ಸ್ವತ್ತುಗಳ ಆಧಾರದ ಮೇಲೆ | 11,69,74,675-66 | |
| 18,94,83,442-82 | ಅವುಗಳಲ್ಲಿ ವ್ಯಕ್ತಿಗಳಿಂದ ಬರಬೇಕಾದ ಬಾಕಿ | 11,69,74,675-66 | |
| 52,97,565-00 | ಅವುಗಳಲ್ಲಿ ಸುಸ್ತಿಯಾದ ಬಾಕಿ | 1,01,88,208-00 | |
| **98,06,57,751-48** | **ದೀರ್ಘಾವಧಿ ಸಾಲಗಳು** | **121,25,43,239-01** | |
| 98,06,57,751-48 | ಅವುಗಳಲ್ಲಿ ಸ್ವತ್ತುಗಳ ಆಧಾರದ ಮೇಲೆ | 121,25,43,239-01 | |
| 98,06,57,751-48 | ಅವುಗಳಲ್ಲಿ ವ್ಯಕ್ತಿಗಳಿಂದ ಬರಬೇಕಾದ ಬಾಕಿ | 121,25,43,239-01 | |
| 1,58,80,628-00 | ಅವುಗಳಲ್ಲಿ ಸುಸ್ತಿಯಾದ ಬಾಕಿ | 90,91,681-00 | |
| **386,45,69,022-22** | **ಮುಂದಿನ ಪುಟಕ್ಕೆ** | | **437,85,78,982-10** |

## ದಿ ದಾವಣಗೆರೆ ಅರ್ಬನ್ ಕೋ-ಆಪ್.

**ದಿನಾಂಕ: 31-03-2020 ಕ್ಕೆ ಇದ್ದಂತೆ**

| 31-03-2019 ರೂ. ಪೈ. | ಬಂಡವಾಳ ಮತ್ತು ಜವಾಬ್ದಾರಿಗಳು | | 31-03-2020 ರೂ. ಪೈ. |
|---|---|---|---|
| **391,07,76,505-45** | ಹಿಂದಿನ ಪುಟದಿಂದ | | **441,69,51,721-14** |
| **3,67,29,589-69** | **ಇತರೆ ಜವಾಬ್ದಾರಿಗಳು** | | **4,44,99,468-28** |
| 11,75,543-11 | ಪಾವತಿಯಾಗಬೇಕಾಗಿದ್ದ ಹುಂಡಿಗಳು | 13,70,299-92 | |
| 20,47,640-00 | ಪಡೆಯದಿರುವ ಲಾಭಾಂಶ | 21,39,503-00 | |
| 15,10,558-02 | ಸಂಡ್ರಿ ಬಾಬ್ತುಗಳು | 15,35,023-02 | |
| 3,71,000-00 | ಆಡಿಟ್ ಫೀ ಪಾವತಿಯಾಗಬೇಕಾದದ್ದು | 3,54,000-00 | |
| 22,30,019-00 | ಆದಾಯ ತೆರಿಗೆ ಅವಕಾಶ | 22,30,019-00 | |
| 54,86,022-00 | ಸಿಬ್ಬಂದಿಗೆ ಎಕ್ಸ್‌ಗ್ರೇಷಿಯಾ ಅವಕಾಶ | 53,16,462-00 | |
| 1,79,17,000-00 | ದೀರ್ಘಾವಧಿ ಸಾಲದ ಮೇಲೆ ಬಂದಂತಹ ಆದಾಯದ ಮೇಲೆ ಅವಕಾಶ | 2,34,17,000-00 | |
| 4,640-70 | ಬಿಲ್ಸ್ ಫಾರ್ ಕಲೆಕ್ಷನ್ | 3,632-70 | |
| 20,93,504-00 | ಟಿ.ಡಿ.ಎಸ್. ಪೇಯಬಲ್ | 26,58,693-60 | |
| 8,93,662-86 | ಸರಕು ಸೇವಾ ತೆರಿಗೆ | 4,74,835-04 | |
| 30,00,000-00 | ಸಿಬ್ಬಂದಿಗಳ ನಿವೃತ್ತಿ ಸಮಯದ ಗಳಿಕೆ ರಜೆ ನಗದೀಕರಣದ ಅವಕಾಶ | 50,00,000-00 | |
| **4,25,01,204-48** | **ಲಾಭ-ನಷ್ಟ ಖಾತೆ** | | **4,42,90,623-87** |
| | ಕಳೆದ ವರ್ಷದ ಅಢಾವೆ ಪತ್ರಿಕೆ ಲಾಭ | 4,25,01,204-48 | |
| | ವಿನಿಯೋಗಿಸಿದ್ದು | 4,25,01,204-48 | |
| | **ಈ ಸಾಲಿನ ನಿವ್ವಳ ಲಾಭ** | **4,42,90,623-87** | |
| | **ಷರಾ : ಈ ಸಾಲಿನಲ್ಲಿ ಗಳಿಸಿದ ಲಾಭ** | **8,94,57,085-87** | |
| | **ಆದಾಯ ತೆರಿಗೆ ಹಾಗೂ ಇತರೆ ಅವಕಾಶಗಳು** | | |
| | 1. ಆದಾಯ ತೆರಿಗೆ ಅವಕಾಶ | 2,50,00,000.00 | |
| | 2. ಕರಡು ಸಾಲದ ನಿಧಿಗೆ [ಆದಾಯ ತೆರಿಗೆ [ಸೆ.36(1)(Viia)] | 75,00,000-00 | |
| | 3. ದೀರ್ಘಾವಧಿ ಸಾಲದ ಮೇಲೆ ಬಂದಂತಹ ಆದಾಯದ ಮೇಲೆ ಅವಕಾಶ [ಸೆ.36(1)(Viii)] | 55,00,000-00 | |
| | 4. ಉತ್ಪಾದನಾ ಆಸ್ತಿಯ ಮೇಲೆ ಘಟನಾಪೇಕ್ಷ ಭಾದ್ಯತೆ ನಿಧಿ | 15,00,000-00 | |
| | 5. ಆಡಿಟ್ ಫೀ ಪಾವತಿಸಬೇಕಾದದ್ದು | 3,50,000-00 | |
| | 6. ಸಿಬ್ಬಂದಿಗೆ ಎಕ್ಸ್‌ಗ್ರೇಷಿಯಾ ಅವಕಾಶ | 53,16,462-00 | |
| | | **4,51,66,462-00** | |
| | ನಿವ್ವಳ ಲಾಭ | **4,42,90,623-87** | |
| **399,00,07,299-62** | **ಜುಮ್ಲಾ** | | **450,57,41,813-29** |
| **86,31,569-99** | **ಘಟನಾಪೇಕ್ಷ ಬಾಧ್ಯತೆಗಳು** | | **87,61,767-99** |
| | ಸ್ವೀಕಾರ ಸಮ್ಮತಿ ಲೇಖ ಮತ್ತು ಇತರೆ ಜವಾಬ್ದಾರಿಗಳು | | |
| 86,31,569-99 | ಆಧಾರ ಸಹಿತ | 87,61,767-99 | |
| 0-00 | ಆಧಾರ ರಹಿತ | 0-00 | |

## ಬ್ಯಾಂಕ್ ಲಿ., ದಾವಣಗೆರೆ

### ಅಢಾವೆ ಪತ್ರಿಕೆ

| 31-03-2019 ರೂ. ಪೈ. | ಸ್ವತ್ತು ಮತ್ತು ಆಸ್ತಿ | | 31-03-2020 ರೂ. ಪೈ. |
|---|---|---|---|
| **386,45,69,022-22** | **ಹಿಂದಿನ ಪುಟದಿಂದ** | | **437,85,78,982-10** |
| **34,220-00** | ವಸೂಲಾಗತಕ್ಕ ಮತ್ತು ವಸೂಲಿಗೆ ಕಳಿಸಿರುವ ಬಿಲ್ಲುಗಳು | | **0-00** |
| **1,71,64,000-00** | ಕಟ್ಟಡಗಳು (ಸವಕಳಿ ತೆಗೆದು) | | **1,55,13,400-00** |
| **81,06,900-00** | ಪೀಠೋಪಕರಣಗಳು ಮತ್ತು ಮುಟ್ಟುಗಳು | | **73,19,300-00** |
| **6,16,66,032-10** | ಬರಬೇಕಾದ ಬಡ್ಡಿ | | **6,32,87,148-89** |
| **0-00** | ಶಾಖೆಗಳ ಹೊಂದಾಣಿಕೆ | | **18,775-00** |
| **3,84,67,125-30** | **ಇತರೆ ಆಸ್ತಿಗಳು** | | **4,10,24,207-30** |
| 17,41,500-00 | ಗಣಕ ಯಂತ್ರಗಳು (ಕಂಪ್ಯೂಟರ್) | 17,46,000.00 | |
| 2,56,740-00 | ಮುಂಗಡ ಖಾತೆ | 1,64,002-00 | |
| 19,379-60 | ದೂರವಾಣಿ ಖಾತೆ | 18,837-50 | |
| 5,40,156-00 | ಆದಾಯ ತೆರಿಗೆ (ಟಿ.ಡಿ.ಎಸ್) | 5,40,156-00 | |
| 2,17,92,901-00 | ತೊಡಗಣೆ ಮೇಲೆ ಬರಬೇಕಾದ ಬಡ್ಡಿ | 2,83,21,309-00 | |
| 1,50,000-00 | ಜೆರಾಕ್ಸ್ ಯಂತ್ರ | 1,07,528-00 | |
| 30,01,518-70 | ಮುದ್ರಣ ಮತ್ತು ಲೇಖನ ಸಾಮಗ್ರಿಗಳ ದಾಸ್ತಾನು | 26,06,246-80 | |
| 1,68,680-00 | ಕೆ.ಇ.ಬಿ. ಠೇವಣಿ | 1,68,680-00 | |
| 51,84,740-00 | ಮುಂಗಡ ಆದಾಯ ತೆರಿಗೆ | 51,84,740-00 | |
| 7,44,000-00 | ಯಂತ್ರೋಪಕರಣ | 15,16,200-00 | |
| 50,508-00 | ಇ-ಸ್ಟಾಂಪ್ ಠೇವಣಿ ಮತ್ತು ಮುಂಗಡ | 50,508-00 | |
| 11,46,000-00 | ಕಂಪ್ಯೂಟರ್ ತಂತ್ರಾಂಶ | 6,00,000-00 | |
| 36,71,002-00 | ಆದಾಯ ತೆರಿಗೆ ಮರುಪಾವತಿ | 0-00 | |
| **399,00,07,299-62** | **ಜುಮ್ಲಾ** | | **450,57,41,813-29** |
| **86,31,569-99** | **ಸಾದಿಲ್ವಾರು ಜವಾಬ್ದಾರಿ**<br>ಸಂಘಟಕ ಜವಾಬ್ದಾರಿ ಸ್ವೀಕೃತ ಮತ್ತು ಇತರೆ ಬಾಧ್ಯತೆ | | **87,61,767-99** |
| 86,31,569-99 | ಆಧಾರ ಸಹಿತ | 87,61,767-99 | |
| 0-00 | ಆಧಾರ ರಹಿತ | 0-00 | |

# ದಿ ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್ ಲಿ., ದಾವಣಗೆರೆ

## ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಯಂತೆ ಆಸ್ತಿ ಜವಾಬ್ದಾರಿ ತಃಖ್ತೆಗಳಿಗೆ ತೋರಿಸಿದ ಅಂಶಗಳ ಬಗ್ಗೆ ಟಿಪ್ಪಣಿಗಳು

1. ದಿನಾಂಕ **31-03-2020**ಕ್ಕೆ ಬ್ಯಾಂಕಿನ ಸಿ.ಆರ್.ಎ.ಆರ್. (Capital to Risk Asset Ratio) ಪ್ರಮಾಣವು ಶೇಕಡ **16.01**ರಷ್ಟು ಇರುವುದು.
2. ತೊಡಗಣೆಗಳ ಮುಖಬೆಲೆ ಪುಸ್ತಕ ಬೆಲೆ ಮತ್ತು ಮಾರುಕಟ್ಟೆ ಬೆಲೆಗಳನ್ನು ಅಥಾವೆ ಪತ್ರಿಕೆಯಲ್ಲಿ ನಮೂದಿಸಿದೆ.
3. (ಅ) ರಿಯಲ್ ಎಸ್ಟೇಟ್ ಮತ್ತು ಕನ್‌ಸ್ಟ್ರಕ್ಷನ್‌ರವರಿಗೆ ಈ ಸಾಲಿನಲ್ಲಿ ಸಾಲವನ್ನು ಕೊಟ್ಟಿರುವುದಿಲ್ಲ.
   (ಆ) ಗೃಹನಿರ್ಮಾಣ/ಖರೀದಿ/ನವೀಕರಣ ಮುಂತಾದ ಉದ್ದೇಶಗಳಿಗೆ ಕೊಟ್ಟ ಸಾಲವು **ರೂ.1494.42** ಲಕ್ಷ ಇರುತ್ತದೆ.
4. ಷೇರು, ಡಿಬೆಂಚರ್‌ಗಳ ಮೇಲೆ ಸಾಲವನ್ನು ಕೊಟ್ಟಿರುವುದಿಲ್ಲ.
5. (ಅ) ಬ್ಯಾಂಕಿನ ನಿರ್ದೇಶಕ ಮಂಡಳಿಯ ಸದಸ್ಯರಿಗೆ ಮತ್ತು ಅವರ ಹತ್ತಿರದ ಸಂಬಂಧಿಗಳಿಗೆ ಭದ್ರತಾ ಆಧಾರಗಳ ಮೇಲೆ (ಠೇವಣಿ ಮೇಲೆ) ನೀಡಿರುವ ಸಾಲದ ಒಟ್ಟು ಮೊತ್ತವು ದಿನಾಂಕ **31-03-2020** ರಂದು **ರೂ.702.70**ಲಕ್ಷ ಇರುತ್ತದೆ.
   (ಆ) ಈ ಸಾಲಿನಲ್ಲಿ ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ಯಾವುದೇ ಆಧಾರ ರಹಿತ ಬ್ಯಾಂಕ್ ಗ್ಯಾರಂಟಿ ಮತ್ತು ಖಾತರಿ ಪತ್ರಗಳನ್ನು ಕೊಟ್ಟಿರುವುದಿಲ್ಲ.
6. 2019-20ನೇ ಸಾಲಿಗೆ ಬ್ಯಾಂಕಿನ ಠೇವಣಿಗಳ ಮೇಲೆ ಬಡ್ಡಿಯ ವೆಚ್ಚವು ಶೇಕಡಾ **6.49ರಷ್ಟು** ಇದೆ.
7. ಬ್ಯಾಂಕಿನ ಪ್ರಸಕ್ತ ಸಾಲಿನ ಅನುತ್ಪಾದಕ ಆಸ್ತಿಗಳು ಕೆಳಕಂಡಂತೆ ಇರುತ್ತದೆ.

ರೂ. ಲಕ್ಷಗಳಲ್ಲಿ

| ದಿನಾಂಕ | ಒಟ್ಟು ಅನುತ್ಪಾದಕ ಆಸ್ತಿಗಳು | | ನಿವ್ವಳ ಅನುತ್ಪಾದಕ ಆಸ್ತಿಗಳು | |
|---|---|---|---|---|
| | ಮೊಬಲಗು | ಶೇಕಡವಾರು | ಮೊಬಲಗು | ಶೇಕಡವಾರು |
| 31.03.2020 | 691.83 | 2.66% | -621.94 | 0.00% |
| 31.03.2019 | 537.27 | 2.38% | -891.50 | 0.00% |
| **ವ್ಯತ್ಯಾಸ** | **154.56** | **0.28%** | **-269.56** | **0.00%** |

8. **2019-20**ನೇ ಸಾಲಿನಲ್ಲಿ ಬ್ಯಾಂಕಿನ ಲಾಭಗಳಿಕೆ ಈ ಕೆಳಕಂಡಂತಿದೆ.
   * ಬ್ಯಾಂಕಿನ ಬಡ್ಡಿಯ ಆದಾಯವು ದುಡಿಯುವ ಬಂಡವಾಳದ ಮೇಲೆ ಶೇಕಡಾ **8.63** ಇರುತ್ತದೆ.
   * ಇತರೆ ಆದಾಯವು ದುಡಿಯುವ ಬಂಡವಾಳದ ಮೇಲೆ ಶೇಕಡಾ **0.12** ಇರುತ್ತದೆ.
   * ಬ್ಯಾಂಕಿನ ಒಟ್ಟು ಗಳಿಕೆಯು ದುಡಿಯುವ ಬಂಡವಾಳದ ಮೇಲೆ ಶೇಕಡಾ **2.01** ಇರುತ್ತದೆ.
   * ಬ್ಯಾಂಕಿನ ಆಸ್ತಿಗಳ ಮೇಲೆ ಬಂದ ಗಳಿಕೆಯ ಪ್ರಮಾಣವು ಶೇಕಡಾ **1.00** ಇರುತ್ತದೆ.
   * ಬ್ಯಾಂಕಿನ ವ್ಯವಹಾರವು ಪ್ರತಿ ಸಿಬ್ಬಂದಿಗೆ **ರೂ. 910.04** ಲಕ್ಷ ಇರುತ್ತದೆ.
   * ನಿವ್ವಳ ಲಾಭವು ಪ್ರತಿ ಸಿಬ್ಬಂದಿಗೆ ಹೋಲಿಸಿದಲ್ಲಿ ರೂ. **6.33** ಲಕ್ಷ ಇದೆ.
9. ಠೇವಣಿಗಳ ಮೇಲೆ ವಿಮೆಯ ಪ್ರೀಮಿಯಮ್‌ನ್ನು ದಿನಾಂಕ **29.05.2019** ಮತ್ತು **29.11.2019** ರಂದು ಒಟ್ಟು ರೂ. **40.22** ಲಕ್ಷ, ಡಿಪಾಜಿಟ್ ಇನ್ಸೂರೆನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟಿ ಕಾರ್ಪೋರೇಷನ್‌ಗೆ ಮುಂಗಡವಾಗಿ ಜಮಾ ಮಾಡಿದೆ ಮತ್ತು ಅವರಿಗೆ ಕೊಡಬೇಕಾದ ಪ್ರೀಮಿಯಂ ಬಾಕಿ ಇರುವುದಿಲ್ಲ.
10. ಬ್ಯಾಂಕು ಸಾಲಾಂತ್ಯಕ್ಕೆ ಠೇವಣಾತಿ ಮತ್ತು ಭದ್ರತೆಗಳ ಆಧಾರದ ಮೇಲೆ **ರೂ. 87.62** ಲಕ್ಷಗಳಿಗೆ ಬ್ಯಾಂಕ್ ಖಾತರಿ (Bank Guarantee)ಯನ್ನು ಕೊಟ್ಟಿರುತ್ತದೆ.
11. **ಎನ್.ಪಿ.ಎ.:-** ಪ್ರಸಕ್ತ ಸಾಲಿನ ಅಂತ್ಯಕ್ಕೆ ಇರುವಂತಹ ಈ ಕೆಳಕಂಡ ನಿಧಿಗಳ ಮೊಬಲಗನ್ನು ಹಿಂದಿನ ಸಾಲಿನಲ್ಲಿದ್ದ ನಿಧಿಗಳ ಮೊಬಲಗುಗಳೊಂದಿಗೆ ತುಲನೆ ಮಾಡಿದ ಹೋಲಿಕೆಯ ವಿವರಗಳು ಈ ಕೆಳಕಂಡಂತಿರುತ್ತದೆ.

ರೂ. ಲಕ್ಷಗಳಲ್ಲಿ

| ದಿನಾಂಕ | ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ | ಉತ್ಪಾದನಾ ಆಸ್ತಿಯ ಮೇಲೆ ಘಟನಾಪೇಕ್ಷ ಭಾದ್ಯತೆ ನಿಧಿ | ಗುಂತಾಯಿಸಿದ ಹಣದ ಮೇಲಿನ ಸವಕಳಿ ನಿಧಿ |
|---|---|---|---|
| 31.03.2020 | 1313.77 | 105.00 | 360.00 |
| 31.03.2019 | 1428.77 | 90.00 | 350.00 |
| ವ್ಯತ್ಯಾಸ | **-115.00** | **15.00** | **10.00** |

12. ಡಫ್ ಖಾತೆಗೆ ವರ್ಗಾವಣೆಯಾಗಿರುವ ಮೊತ್ತ **ರೂ. 75.94 ಲಕ್ಷ**

| ಡಿ.ವಿ. ಆರಾಧ್ಯಮಠ | ಮತ್ತಿಹಳ್ಳಿ ವೀರಣ್ಣ | ಟಿ.ಎಸ್. ಜಯರುದ್ರೇಶ್ | ಸುರೇಖಾ ಎಂ. ಚಿಗಟೇರಿ | ಮುಂಡಾಸ್ ವೀರೇಂದ್ರ | ಕೋಗುಂಡಿ ಬಕ್ಕೇಶಪ್ಪ |
|---|---|---|---|---|---|
| ಪ್ರಧಾನ ವ್ಯವಸ್ಥಾಪಕರು | ನಿರ್ದೇಶಕರು | ನಿರ್ದೇಶಕರು | ನಿರ್ದೇಶಕರು | ಚಾರ್ಟರ್ಡ್ ಅಕೌಂಟೆಂಟ್, ನಿರ್ದೇಶಕರು | ಅಧ್ಯಕ್ಷರು |

## ಲೆಕ್ಕ ಪರಿಶೋಧಕರ ಪ್ರಮಾಣ ಪತ್ರ

ನಾನು ದಿ. ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ ಇದರ ಕೇಂದ್ರ ಕಛೇರಿ ಮತ್ತು ಆರು ಶಾಖೆಗಳ (ಕ್ರೂಢೀಕೃತ) **2019-20ನೇ** ಸಾಲಿನ ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತೇನೆ. ಇದಕ್ಕೆ ಸಂಬಂಧಪಟ್ಟ ಲೆಕ್ಕಪತ್ರದ ಪುಸ್ತಕಗಳು ಒದಗಿಸಿದ ವಿವರಗಳು ಹಾಗೂ ಸ್ಪಷ್ಟೀಕರಣಗಳ ಮೇರೆಗೆ ನನ್ನ ತಿಳುವಳಿಕೆ ಹಾಗೂ ನಂಬಿಕೆ ಮೇರೆಗೆ ಇದರ ಜೊತೆಗೆ ಲಗತ್ತಿಸಿರುವ ಆಸ್ತಿ ಜವಾಬ್ದಾರಿ ತಃಖ್ತೆ ಮತ್ತು ಲಾಭ ನಷ್ಟ ತಃಖ್ತೆಯು ದಿನಾಂಕ: **31-03-2020** ಕ್ಕೆ ಇದ್ದಂತೆ ನನ್ನ ವರದಿಯಲ್ಲಿನ ಷರಾಗಳಿಗೆ ಒಳಪಟ್ಟು ಬ್ಯಾಂಕಿನ ನೈಜ ಆರ್ಥಿಕ ಸ್ಥಿತಿಗತಿಯನ್ನು ಪ್ರತಿಬಿಂಬಿಸುತ್ತದೆಂದು ದೃಢೀಕರಿಸುತ್ತೇನೆ.

**ದಿನಾಂಕ : 11-09-2020**

**ಸ್ಥಳ : ದಾವಣಗೆರೆ**

ಎಸ್. ಚನ್ನಬಸವಣ್ಣ
ಚಾರ್ಟರ್ಡ್ ಅಕೌಂಟೆಂಟ್ಸ್
ಎಂ. ನಂ. 213853
ಮಾಲೀಕರು, ಮೆ|| ಚನ್ನಬಸವಣ್ಣ ಅಂಡ್ ಕಂ. ದಾವಣಗೆರೆ.
ಎಫ್‌ಆರ್. ನಂ. 010580S

# ಉಪವಿಧಿಗಳ ತಿದ್ದುಪಡಿ–2020

| ಉಪ ವಿಧಿ ಸಂ. | ಹಾಲಿ ಇರುವ ಉಪವಿಧಿ | ಉಪ ವಿಧಿ ಸಂ. | ತಿದ್ದುಪಡಿಗೆ ಪ್ರಸ್ತಾಪಿಸಿದ ತಿದ್ದುಪಡಿ | ತಿದ್ದುಪಡಿಗೆ ಕಾರಣ |
|---|---|---|---|---|
| 4(33) | **ಪದಗಳ ಅರ್ಥ ವಿವರಣೆ:**<br>**ಹೊಸ ಸೇರ್ಪಡೆ** | 4(33) | **ಪದಗಳ ಅರ್ಥ ವಿವರಣೆ:**<br>**"ವ್ಯವಸ್ಥಾಪನಾ ಸಮಿತಿ"** (Board of management) ಎಂದರೆ, ಬ್ಯಾಂಕಿನ ಆಡಳಿತ ನಿರ್ವಹಣಾ ನಿಕಾಯವಾಗಿದ್ದು, ಬ್ಯಾಂಕಿಂಗ್‌ನಲ್ಲಿ ವಿಶೇಷ ಜ್ಞಾನ ಹಾಗೂ ನುರಿತ ಅನುಭವಿಗಳನ್ನು ಒಳಗೊಂಡಿದ್ದು, ಮಂಡಲಿ ತನ್ನ ಜವಾಬ್ದಾರಿಗಳನ್ನು ನಿರ್ವಹಿಸಲು ಸಹಕರಿಸುವುದು ಮತ್ತು ಬ್ಯಾಂಕಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ವೃತ್ತಿಪರವಾಗಿ ನಿರ್ವಹಿಸಲು ಹಾಗೂ ಕೇಂದ್ರೀಕೃತ ಗಮನ ಹರಿಸುವಂತೆ ಸುಗಮ ಮಾರ್ಗ ಮಾಡುವುದು ಎಂದಾಗಿದೆ. | ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯನ್ವಯ ತಿದ್ದುಪಡಿ ಪ್ರಸ್ತಾಪಿಸಿದೆ |
| 49(1) | **ಮಂಡಲಿಯ ಸಭೆಗಳು :**<br>ಮಂಡಲಿ ಮತ್ತು ಉಪಸಮಿತಿಗಳ ಸಭೆಗಳನ್ನು ಬ್ಯಾಂಕಿನ ನೋಂದಾಯಿತ ಕಛೇರಿಯಲ್ಲಿ ನಡೆಸತಕ್ಕದ್ದು; | 49(1) | **ಮಂಡಲಿಯ ಸಭೆಗಳು:**<br>ಆಡಳಿತ ಮಂಡಲಿ, ವ್ಯವಸ್ಥಾಪನಾ ಸಮಿತಿ, ಹಾಗೂ ಉಪಸಮಿತಿಗಳ ಸಭೆಗಳು ಬ್ಯಾಂಕಿನ ನೋಂದಾಯಿತ ಕಚೇರಿಯಲ್ಲಿಯೇ ನಡೆಯತಕ್ಕದ್ದು. | |
| 57(3)<br><br>(ಬಿ.ಎಫ್) | **ಮಂಡಲಿಯ ಕರ್ತವ್ಯಗಳು ಮತ್ತು ಅಧಿಕಾರಗಳು**<br>ಪೂರ್ವೋಕ್ತ ಅಧಿಕಾರಗಳ ಸಾಮಾನ್ಯತೆಗೆ ಹಾನಿ ಇಲ್ಲದಂತೆ, ಅಂಥ ಅಧಿಕಾರಗಳು ಮತ್ತು ಕರ್ತವ್ಯಗಳು ಮುಂದಿನವುಗಳನ್ನು ಒಳಗೊಂಡಿರ ತಕ್ಕದ್ದು<br>**ಹೊಸ ಸೇರ್ಪಡೆ** | 57(3)<br><br>(ಬಿ.ಎಫ್) | ಮಂಡಲಿಯ ಕರ್ತವ್ಯಗಳು ಹಾಗೂ ಅಧಿಕಾರಗಳು: ಸಾಮಾನ್ಯವಾಗಿ ಈ ಹಿಂದೆ ಹೇಳಿದವುಗಳಿಗೆ ಪೂರ್ವಾಗ್ರಹವಾಗದಂತೆ, ಅಂಥ ಅಧಿಕಾರಗಳು ಹಾಗೂ ಕರ್ತವ್ಯಗಳು ಈ ಕೆಳಗಿನವುಗಳನ್ನು ಒಳಗೊಂಡಿರತಕ್ಕದ್ದು.<br><br>ಆಡಳಿತ/ ವ್ಯವಸ್ಥಾಪನಾ ಮಂಡಲಿ:<br>i) ಈ ಕೆಳಗೆ ಹೇಳಿದವುಗಳ ಪೈಕಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ವಿಷಯಗಳಲ್ಲಿ ವಿಶೇಷ ಜ್ಞಾನ ಹಾಗೂ ನುರಿತ ಅನುಭವ ಹೊಂದಿರುವ ಆರು (6) ಸದಸ್ಯರನ್ನೊಳಗೊಂಡ ವ್ಯವಸ್ಥಾಪನಾ ಸಮಿತಿ ಇರತಕ್ಕದ್ದು.<br>ಎ) ಲೆಕ್ಕಶಾಸ್ತ್ರ<br>ಬಿ) ಕೃಷಿ ಹಾಗೂ ಗ್ರಾಮೀಣ ಆರ್ಥಿಕ ವ್ಯವಸ್ಥೆ<br>ಸಿ) ಬ್ಯಾಂಕಿಂಗ್<br>ಡಿ) ಸಹಕಾರ<br>ಇ) ಅರ್ಥಶಾಸ್ತ್ರ<br>ಎಫ್) ಹಣಕಾಸು<br>ಜಿ) ಕಾನೂನು<br>ಎಚ್) ಸಣ್ಣ ಕೈಗಾರಿಕೆ<br>ಐ) ಮಾಹಿತಿ ತಂತ್ರಜ್ಞಾನ<br>ಜೆ) ಭಾರತೀಯ ರಿಸರ್ವ ಬ್ಯಾಂಕಿನ ಅಭಿಪ್ರಾಯದಲ್ಲಿ ಸೂಕ್ತವೆನಿಸುವ ಇನ್ನಿತರ ಯಾವುದೇ ವಿಷಯ. | |

| ಉಪ ವಿಧಿ ಸಂ. | ಹಾಲಿ ಇರುವ ಉಪವಿಧಿ | ಉಪ ವಿಧಿ ಸಂ. | ತಿದ್ದುಪಡಿಗೆ ಪ್ರಸ್ತಾಪಿಸಿದ ತಿದ್ದುಪಡಿ |
|---|---|---|---|
| | | | ii) ತಕ್ಷಣದ ಅವಧಿಯ ಹಿಂದಿನ ಮೂರು ವರ್ಷಗಳಲ್ಲಿ ಬ್ಯಾಂಕಿನೊಂದಿಗೆ ವ್ಯವಹಾರಿಕ ಸಂಬಂಧ ಹೊಂದಿದ್ದ ಯಾವುದೇ ವ್ಯಕ್ತಿ ಸದಸ್ಯನಾಗಲು ಅರ್ಹನಾಗಿರತಕ್ಕದಲ್ಲ. ಈ ಉದ್ದೇಶಕ್ಕಾಗಿ ಬ್ಯಾಂಕಿನೊಂದಿಗೆ ಠೇವಣಿ ಹೊಂದಿರುವ ವ್ಯಕ್ತಿಯನ್ನು ವ್ಯವಹಾರಿಕ ಸಂಬಂಧ ಹೊಂದಿದವನೆಂದು ವರ್ಗೀಕರಿಸುವಂತಿಲ್ಲ.<br>iii) ನಿಗದಿತ ಮಾನದಂಡಗಳನ್ನು ಪೂರೈಸುತ್ತಿದ್ದಲ್ಲಿ ಗರಿಷ್ಠ ಮೂರು ವ್ಯವಸ್ಥಾಪನಾ ಸಮಿತಿ ಸದಸ್ಯರನ್ನು ಮಾತ್ರ ಆಡಳಿತ ಮಂಡಲಿಯಿಂದ ಪಡೆದುಕೊಳ್ಳಬಹುದು.<br>iv) ಆಡಳಿತ ಮಂಡಲಿಯಿಂದ ಪಡೆದುಕೊಂಡ ಸದಸ್ಯನನ್ನು ಹೊರತುಪಡಿಸಿ ವ್ಯವಸ್ಥಾಪನಾ ಸಮಿತಿಯ ಸದಸ್ಯನ ಕಾರ್ಯವ್ಯಾಪ್ತಿಯು ಒಂದಕ್ಕೊಂದು ತಳುಕು ಬಳುಕಾಗದಂತಹ ಒಂದಕ್ಕಿಂತ ಹೆಚ್ಚು, ಗರಿಷ್ಠ ಮೂರು ಬ್ಯಾಂಕುಗಳ ವ್ಯವಸ್ಥಾಪನಾ ಸಮಿತಿ ಸದಸ್ಯನಾಗಿ ನೇಮಕಗೊಳ್ಳಲು ಅರ್ಹನಾಗಿರುತ್ತಾನೆ.<br>v) ಪ್ರಧಾನ ವ್ಯವಸ್ಥಾಪಕ/ ಮುಖ್ಯಕಾರ್ಯನಿರ್ವಾಹಕನು ಮತದಾನದ ಹಕ್ಕಿಲ್ಲದ ಸದಸ್ಯನಾಗಿರುತ್ತಾನೆ.<br>vi) ಕಾಯ್ದೆ ಹಾಗೂ ನಿಯಮಗಳಲ್ಲಿ ಆಡಳಿತ ಮಂಡಲಿ ಸದಸ್ಯನಿಗೆ ನಿರ್ದಿಷ್ಟ ಪಡಿಸಿದ ಯಾವುದೇ ಅನರ್ಹತೆಗಳು ವ್ಯವಸ್ಥಾಪನಾ ಸಮಿತಿ ಸದಸ್ಯನಿಗೂ ಅನ್ವಯವಾಗುತ್ತವೆ.<br>vii) ವ್ಯವಸ್ಥಾಪನಾ ಸಮಿತಿಯ ಅವಧಿಯು ಆಡಳಿತ ಮಂಡಲಿ ಅವಧಿಯೊಂದಿಗೆ ಜೊತೆ ಜೊತೆಯಾಗಿ ಮುಕ್ತಾಯವಾಗುತ್ತದೆ.<br>viii) ವ್ಯವಸ್ಥಾಪನಾ ಸಮಿತಿಯ ಯಾವುದೇ ಸದಸ್ಯನು ರಿಸರ್ವ್ ಬ್ಯಾಂಕ್ ನಿರ್ಧಿಷ್ಟ ಪಡಿಸಿದ ಮಾನದಂಡಗಳನ್ನು ಪೂರೈಸುತ್ತಿಲ್ಲದಿದ್ದಲ್ಲಿ, ಅಥವಾ ಬ್ಯಾಂಕಿನ ಹಿತಾಸಕ್ತಿಗೆ, ಅಥವಾ ಠೇವುದಾರರಿಗೆ ಅಥವಾ ಇಬ್ಬರಿಗೂ ಮಾರಕವಾಗುವಂತೆ ಕಾರ್ಯನಿರ್ವಹಿಸುತ್ತಿದ್ದಲ್ಲಿ ಅಂಥ ಸದಸ್ಯನನ್ನು ರಿಸರ್ವ್ ಬ್ಯಾಂಕು ವಜಾ ಮಾಡುವ ಅಧಿಕಾರ ಹೊಂದಿರತಕ್ಕದ್ದು. ವ್ಯವಸ್ಥಾಪನಾ ಸಮಿತಿಯ ಯಾವುದೇ ಸದಸ್ಯನನ್ನು ವಜಾ ಮಾಡುವ ಪೂರ್ವದಲ್ಲಿ, ವ್ಯವಸ್ಥಾಪನಾ ಸಮಿತಿಯ ಯಾವುದೇ ಸದಸ್ಯನು ನೀಡಿದ ರಾಜೀನಾಮೆ ಅಂಗೀಕರಿಸುವ ಪೂರ್ವದಲ್ಲಿ, ಆಡಳಿತ ಮಂಡಲಿಯು ರಿಸರ್ವ್ ಬ್ಯಾಂಕಿನ ಸಹಮತ ಪಡೆದುಕೊಳ್ಳತಕ್ಕದ್ದು. ವ್ಯವಸ್ಥಾಪನಾ ಸಮಿತಿಯ ಕಾರ್ಯನಿರ್ವಹಣೆ ತೃಪ್ತಿಕರವಾಗಿಲ್ಲದಿದ್ದಲ್ಲಿ, ವ್ಯವಸ್ಥಾಪನಾ ಸಮಿತಿಯನ್ನು ವಜಾ ಮಾಡುವ ಅಧಿಕಾರ ರಿಸರ್ವ್ ಬ್ಯಾಂಕಿಗೆ ಇರತಕ್ಕದ್ದು. ವ್ಯವಸ್ಥಾಪನಾ ಸಮಿತಿಯ ಸದಸ್ಯನನ್ನು ವಜಾ ಮಾಡಿದ ಅಥವಾ ವ್ಯವಸ್ಥಾಪನಾ ಸಮಿತಿಯನ್ನು ಕಿತ್ತು ಹಾಕಿದ ನಂತರ ಆಡಳಿತ ಮಂಡಲಿಯು ಅಂತಹ ಯಾವುದೇ ಪ್ರಕರಣದಲ್ಲಿ ಮೂರು ತಿಂಗಳ ಅವಧಿಯೊಳಗಾಗಿ ಹೊಸ ಸದಸ್ಯನನ್ನು ನೇಮಕ ಮಾಡತಕ್ಕದ್ದು, ಅಥವಾ ಹೊಸ ವ್ಯವಸ್ಥಾಪನಾ ಸಮಿತಿಯನ್ನು ರಚಿಸತಕ್ಕದ್ದು, ಮಧ್ಯಂತರ ವ್ಯವಸ್ಥೆಯಾಗಿ ಆಡಳಿತ ಮಂಡಲಿಯು ವ್ಯವಸ್ಥಾಪನಾ ಮಂಡಲಿಯ ಕಾರ್ಯಗಳನ್ನು ನಿರ್ವಹಿಸಬಹುದು. ವ್ಯವಸ್ಥಾಪನಾ ಸಮಿತಿಯು ಬ್ಯಾಂಕಿಂಗ್‌ಗೆ ಸಂಬಂಧಿಸಿದ ಕಾರ್ಯಗಳ ಮೇಲ್ವಿಚಾರಣೆ ಮಾಡತಕ್ಕದ್ದು, ಬ್ಯಾಂಕಿನ ಸುಗಮ ನಿರ್ವಹಣೆಗಾಗಿ ಆಡಳಿತ ಮಂಡಲಿ ತನಗೆ ನೀತಿ ರೂಪಿಸಲು ಅಥವಾ ಯಾವುದೇ ಸಂಬಂಧಿತ ವಿಷಯವಾಗಿ ವಿಶೇಷವಾಗಿ ನಿಯೋಜಿಸಿದಂತೆ ಆಡಳಿತ ಮಂಡಲಿಗೆ ಸಹಕರಿಸತಕ್ಕದ್ದು, |

| ಉಪ ವಿಧಿ ಸಂ. | ಹಾಲಿ ಇರುವ ಉಪವಿಧಿ | ಉಪ ವಿಧಿ ಸಂ. | ತಿದ್ದುಪಡಿಗೆ ಪ್ರಸ್ತಾಪಿಸಿದ ತಿದ್ದುಪಡಿ |
|---|---|---|---|
| | | | ಸಾಲ ಸಮಿತಿಯು ವ್ಯವಸ್ಥಾಪನಾ ಸಮಿತಿಯ ಶಿಫಾರಸ್ಸುಗಳಿಗೆ ಭಿನ್ನಾಭಿಪ್ರಾಯ ಹೊಂದಿದ್ದಲ್ಲಿ, ಆ ವಿಷಯವನ್ನು ಆಡಳಿತ ಮಂಡಲಿಗೆ ಒಪ್ಪಿಸಬಹುದು. ಅಂಥ ಸಂದರ್ಭದಲ್ಲಿ ಮಂಡಳಿಯ ವ್ಯವಸ್ಥಾಪನಾ ಸಮಿತಿಯ ಶಿಫಾರಸ್ಸುಗಳ ಬಗ್ಗೆ ಭಿನ್ನಾಭಿಪ್ರಾಯ ಹೊಂದಿದ್ದಲ್ಲಿ ಅದು ತನ್ನ ಲಿಖಿತದಲ್ಲಿ ಕಾರಣಗಳನ್ನು ನಮೂದಿಸಿ ತೀರ್ಮಾನ ತೆಗೆದುಕೊಳ್ಳತಕ್ಕದ್ದು.<br>ವ್ಯವಸ್ಥಾಪನಾ ಸಮಿತಿಯ ಕಾರ್ಯಗಳು ಈ ಕೆಳಗಿನವುಗಳನ್ನು ಒಳಗೊಂಡಿರತಕ್ಕದ್ದು:<br>ಎ) ಮಂಡಲಿ ಅಥವಾ ಯಾವುದೇ ಸಮಿತಿಗೆ ಮಂಡಿಸಿದ ಎಲ್ಲಾ ಪ್ರಸ್ತಾವನೆಗಳ ಮೇಲೆ ನುರಿತ ಸಲಹೆ ನೀಡುವುದು.<br>ಬಿ) ಅನುತ್ಪಾದಕ ಖಾತೆಗಳ ವಸೂಲಾತಿಗಾಗಿ ಏಕಕಾಲಿಕ ತೀರುವಳಿ, ರಾಜೀ ತೀರುವಳಿ ಕ್ರಮಗಳಿಗಾಗಿ ನುರಿತ ಸಲಹೆ ಒದಗಿಸುವುದು ಮತ್ತು ಆ ಬಗ್ಗೆ ಗಮನಹರಿಸಲು ಮಂಡಳಿಗೆ ಸಹಕರಿಸುವುದು.<br>ಸಿ) ಬ್ಯಾಂಕಿನಲ್ಲಿ ನಿಧಿಗಳ ನಿರ್ವಹಣೆ ಹಾಗೂ ತೆಗೆದುಕೊಂಡ ಸಾಲಗಳ ಮೇಲ್ವಿಚಾರಣೆ ಮಾಡುವುದು.<br>ಡಿ) ಮಂಡಲಿ ಅನುಮೋದಿಸಿದ ನೀತಿಯನುಸಾರ ಬ್ಯಾಂಕಿನ ನಿಧಿಗಳ ಹೂಡಿಕೆ ಕುರಿತು ಪ್ರಸ್ತಾವನೆಗಳ ಶಿಫಾರಸ್ಸು ಮಾಡುವುದು.<br>ಇ) ಬ್ಯಾಂಕಿನ ಆಂತರಿಕ ನಿಯಂತ್ರಣಗಳು, ವ್ಯವಸ್ಥೆಗಳು ಹಾಗೂ ನಷ್ಟ ನಿರ್ವಹಣೆಗಳ ಮೇಲುಸ್ತುವಾರಿ ಮಾಡುವುದು.<br>ಎಫ್) ಬ್ಯಾಂಕಿನಲ್ಲಿ ಗಣಕೀಕರಣ ಕಾರ್ಯಗತಗೊಳಿಸುವಿಕೆ, ತಂತ್ರಜ್ಞಾನ ಅಳವಡಿಸಿಕೊಳ್ಳುವಿಕೆ ಹಾಗೂ ಇತರೆ ಪ್ರಾಸಂಗಿಕ ವಿಷಯಗಳ ಮೇಲ್ವಿಚಾರಣೆ ಮಾಡುವುದು.<br>ಜಿ) ಆಂತರಿಕ ಲೆಕ್ಕಪರಿಶೋಧನೆ, ಅನುಪಾಲನೆಯೂ ಸೇರಿದಂತೆ ಪರಿವೀಕ್ಷಣಾ ಕಾರ್ಯಗಳ ಮೇಲುಸ್ತುವಾರಿ ಮಾಡುವುದು.<br>ಎಚ್) ಬ್ಯಾಂಕಿಂಗ್ ಕಾರ್ಯ ಸಂಬಂಧಿತವಾಗಿ ವಿಶದೀಕೃತವಾದ ಸಾಲ ನೀತಿ, ಹೂಡಿಕೆ ನೀತಿ, ವಸೂಲಾತಿ ನೀತಿ, ಎಎಲ್ಎಮ್ ಹಾಗೂ ನಷ್ಟ ನಿರ್ವಹಣೆ ಇತ್ಯಾದಿ ಕುರಿತು ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಗಳಿಗೆ ಹೊಂದಾಣಿಕೆ ಇರುವಂತೆ ನೀತಿಗಳನ್ನು ರೂಪಿಸಲು ಮಂಡಲಿಗೆ ಸಹಾಯ ಮಾಡುವುದು.<br>ಐ) ಮಂಡಲಿಯಿಂದ ಅಧ್ಯರ್ಪಿತವಾದ ಇನ್ನಿತರ ಯಾವುದೇ ಜವಾಬ್ದಾರಿಗಳನ್ನು ನಿರ್ವಹಿಸುವುದು.<br>ix) ದೂರು ನಿವಾರಣಾ ವ್ಯವಸ್ಥೆ ಮೇಲೆ ನಿಗಾ ಇರಿಸುವುದು.<br>x) ವ್ಯವಸ್ಥಾಪನಾ ಸಮಿತಿಯು ಬ್ಯಾಂಕಿನ ವ್ಯವಹಾರಗಳನ್ನು ನಿರ್ವಹಿಸಲು ಅಗತ್ಯವಿದ್ದಾಗ, ಯಾವಾಗಲಾದರೂ ಸಭೆ ಸೇರಬಹುದು, ಆದರೆ, ತಿಂಗಳಿಗೆ ಒಮ್ಮೆಯಾದರೂ ಸಭೆ ಸೇರತಕ್ಕದ್ದು, ವ್ಯವಸ್ಥಾಪನಾ ಸಮಿತಿಯ ಚೇರಮನ್‌ನನ್ನು ಆಡಳಿತ ಮಂಡಲಿಯು ನೇಮಕ ಮಾಡತಕ್ಕದ್ದು, ಆದಾಗ್ಯೂ ಮಂಡಲಿಯ ಚೇರಮನ್‌ನನ್ನು ವ್ಯವಸ್ಥಾಪನಾ ಸಮಿತಿಯ ಚೇರಮನ್‌ನನ್ನಾಗಿ ನೇಮಕ ಮಾಡತಕ್ಕದ್ದಲ್ಲ. ಸಭೆಗೆ ಚೇರಮನ್‌ನು ಗೈರುಹಾಜರಿದ್ದಲ್ಲಿ ವ್ಯವಸ್ಥಾಪನಾ ಸಮಿತಿಯ ಸದಸ್ಯರು ತಮ್ಮೊಳಗೆ ಒಬ್ಬರನ್ನು ಸಭೆಯ ಚೇರಮನ್ ಆಗಿ ಆಯ್ಕೆ ಮಾಡಿಕೊಳ್ಳಬಹುದು. ಸಭೆಯ ಯಥಾವತ್ ನಡುವಳಿಕೆಗಳ ದಾಖಲೆಯನ್ನು ನಿರ್ವಹಿಸತಕ್ಕದ್ದು ಮತ್ತು ಅದನ್ನು ಮಂಡಲಿಯ ಸಭೆಗೆ ಮಂಡಿಸತಕ್ಕದ್ದು.<br>xi) ವ್ಯವಸ್ಥಾಪನಾ ಸಮಿತಿಯ ಒಟ್ಟು ಸದಸ್ಯರ ಪೈಕಿ 2/3 ಸದಸ್ಯರು ಸಭೆಯ ಅಗತ್ಯ ಸಂಖ್ಯಾ ಬಲ (ಕೋರಂ) ಆಗಿರತಕ್ಕದ್ದು. |

| ಉಪ ವಿಧಿ ಸಂ. | ಹಾಲಿ ಇರುವ ಉಪವಿಧಿ | ಉಪ ವಿಧಿ ಸಂ. | ತಿದ್ದುಪಡಿಗೆ ಪ್ರಸ್ತಾಪಿಸಿದ ತಿದ್ದುಪಡಿ |
|---|---|---|---|
| | | | xii) ವ್ಯವಸ್ಥಾಪನಾ ಸಮಿತಿಯ ಸದಸ್ಯರ ಸೇವೆಗೆ ಭತ್ಯೆ/ ಸಭಾಭತ್ಯೆಗಳನ್ನು ನೀಡಲು ಕಾರ್ಯನಿರ್ವಾಹಕ ಮಂಡಲಿಯು ನಿರ್ಧರಿಸುವುದು.<br>xiii) ವ್ಯವಸ್ಥಾಪನಾ ಸಮಿತಿಯ ಸದಸ್ಯರು ರಿಸರ್ವ ಬ್ಯಾಂಕ್ ನಿಗದಿಪಡಿಸಿದ "ಅರ್ಹತೆ ಮತ್ತು ಯೋಗ್ಯತೆ" ಅಳತೆ ಗೋಲುಗಳನ್ನು ಅವನು/ಅವಳು ಪೂರೈಸಿರುವ ಬಗ್ಗೆ ನೇಮಕಾತಿ ಸಂದರ್ಭದಲ್ಲಿ ಪ್ರಧಾನ ವ್ಯವಸ್ಥಾಪಕ/ ಮುಖ್ಯಕಾರ್ಯನಿರ್ವಾಹಕ ಅಥವಾ ವ್ಯವಸ್ಥಾಪನಾ ಸಮಿತಿಯ ಸದಸ್ಯರಿಂದ ವಾಗ್ದಾನ ಸಮೇತ ಘೋಷಣಾ ಪತ್ರ ಪಡೆದುಕೊಳ್ಳತಕ್ಕದ್ದು. |
| (ಬಿಜಿ) | **ಹೊಸ ಸೇರ್ಪಡೆ** | (ಬಿಜಿ) | ಬ್ಯಾಂಕಿಂಗ್ ವ್ಯವಸ್ಥೆಯ ಉದ್ದೇಶಗಳು ಫಲಪ್ರದವಾಗಲು ಅಥವಾ ಪರಿಣಾಮಕಾರಿಯಾಗಿ ಈಡೇರಲು ಅವಶ್ಯವಿರುವ ಅಂತಹ ಇತರ ಯಾವುದೇ ಕ್ರಮಗಳನ್ನು ಕೈಗೆತ್ತಿಕೊಳ್ಳುವುದು. |
| 61 | **ಪ್ರಧಾನ ವ್ಯವಸ್ಥಾಪಕ / ಮುಖ್ಯಕಾರ್ಯ ನಿರ್ವಾಹಕನ ಕರ್ತವ್ಯಗಳು ಮತ್ತು ಅಧಿಕಾರಗಳು:**<br>ಪ್ರಧಾನ ವ್ಯವಸ್ಥಾಪಕ /ಮುಖ್ಯ ಕಾರ್ಯನಿರ್ವಾಹಕನು ಅಂಗೀಕೃತ ವಿಶ್ವವಿದ್ಯಾಲಯುದ ಪದವಿ ಪಡೆದಿರುವಂತವನಾಗಿದ್ದು, ಕಾಯ್ದೆಯ ಕಲಂ 29ಜಿ ಪ್ರಕಾರ ಮಂಡಲಿಯಿಂದ ನೇಮಕವಾದ ಪೂರ್ಣಾವಧಿಯ ವೇತನ ಪಡೆಯುವ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ/ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಮತ್ತು ಮುಖ್ಯ ಆಡಳಿತಾಧಿಕಾರಿ ಯಾಗಿರತಕ್ಕದು. ಮಂಡಲಿಯು ಆಗಿಂದಾಗ್ಗೆ ವಹಿಸುವ ಕರ್ತವ್ಯಗಳ ಜೊತೆಗೆ, ಆತನ ಕರ್ತವ್ಯ ಮತ್ತು ಅಧಿಕಾರಗಳು ಈ ಕೆಳಗಿನಂತೆ ಇರತಕ್ಕದ್ದು; | 61 | **ಪ್ರಧಾನ ವ್ಯವಸ್ಥಾಪಕ / ಮುಖ್ಯಕಾರ್ಯ ನಿರ್ವಾಹಕನ ಕರ್ತವ್ಯಗಳು ಮತ್ತು ಅಧಿಕಾರಗಳು:**<br>ಪ್ರಧಾನ ವ್ಯವಸ್ಥಾಪಕ/ ಮುಖ್ಯಕಾರ್ಯನಿರ್ವಾಹಕನು ಕಲಂ 29ಜಿ ಪ್ರಕಾರ ಹಾಗೂ ಮಹಾಸಭೆ ಹಾಗೂ ರಿಸರ್ವ್ ಬ್ಯಾಂಕಿನ ಪೂರ್ವಾನುಮತಿ ಪಡೆದು ಮಂಡಲಿಯಿಂದ ನೇಮಿಸಲ್ಪಟ್ಟ ಪ್ರಧಾನ ವ್ಯವಸ್ಥಾಪಕ/ ಮುಖ್ಯಕಾರ್ಯನಿರ್ವಾಹಕ ಮತ್ತು ಮುಖ್ಯ ಆಡಳಿತಾತ್ಮಕ ಅಧಿಕಾರಿಯಾಗಿರತಕ್ಕದ್ದು. ರಿಸರ್ವ್ ಬ್ಯಾಂಕಿನಿಂದ ಅಂಥ ಅನುಮತಿಯನ್ನು ಪ್ರಸ್ತುತ ಪ್ರಧಾನ ವ್ಯವಸ್ಥಾಪಕ/ಮುಖ್ಯ ಕಾರ್ಯನಿವಾಹಕನ ಅವಧಿಯು ಮುಕ್ತಾಯವಾಗುವ ಕನಿಷ್ಠ ಮೂರು ತಿಂಗಳ ಮೊದಲು ಕೋರತಕ್ಕದ್ದು. ಅವನು ಇವುಗಳ ಸಮೇತ ಪದವಿಧರನಾಗಿರ ತಕ್ಕದ್ದು, (ಎ) ಸಿಎಐಐಬಿ/ಡಿಬಿಎಫ್/ ಡಿಪ್ಲೋಮಾ ಇನ್ ಕೋ ಆಪರೇಟಿವ್ ಬಿಸಿನೆಸ್ ಮ್ಯಾನೇಜಮೆಂಟ್ ಅಥವಾ ತತ್ಸಮಾನ ಅರ್ಹತೆ; ಅಥವಾ (ಬಿ)ಚಾರ್ಟರ್ಡ್/ಕಾಸ್ಟ ಅಕೌಂಟೆಂಟ್; ಸಿ) ಯಾವುದೇ ಸ್ನಾತಕೋತ್ತರ ಪದವಿ, 35 ವರ್ಷಗಳಿಗಿಂತ ಕಡಿಮೆಯಿಲ್ಲದ ಮತ್ತು 60 ವರ್ಷ ಮೀರದ ವಯೋಮಿತಿಯವನಾಗಿರತಕ್ಕದ್ದು, ನೇಮಕಾತಿ ಸಂದರ್ಭದಲ್ಲಿ ಬ್ಯಾಂಕಿಂಗ್ ವಲಯದಲ್ಲಿ ಮಧ್ಯಮ/ಹಿರಿಯ ಹಂತದಲ್ಲಿ ಕನಿಷ್ಠ ಎಂಟು ವರ್ಷಗಳ ಸೇವಾ ಅನುಭವ ಹೊಂದಿರತಕ್ಕದ್ದು. ಪ್ರಧಾನ ವ್ಯವಸ್ಥಾಪಕ/ ಮುಖ್ಯಕಾರ್ಯನಿರ್ವಾಹಕನು ರಿಸರ್ವ್ ಬ್ಯಾಂಕ್ ನಿಗದಿಪಡಿಸಿದ ಅಳತೆಗೋಲು (ಮಾನದಂಡ) ಪೂರೈಸದಿದ್ದಲ್ಲಿ, ಬ್ಯಾಂಕಿನ ಹಿತಾಸಕ್ತಿಗೆ ಅಥವಾ ಠೇವಣಿದಾರರಿಗೆ ಅಥವಾ ಇಬ್ಬರಿಗೂ ಮಾರಕವಾಗುವ ರೀತಿಯಲ್ಲಿ ವರ್ತಿಸುತ್ತಿದ್ದಲ್ಲಿ ಅವನನ್ನು ತೆಗೆದುಹಾಕುವ (ವಜಾ ಮಾಡುವ) ಅಧಿಕಾರ ರಿಸರ್ವ್ ಬ್ಯಾಂಕಿಗೆ ಇರತಕ್ಕದ್ದು. ಹಾಗೆ ಪ್ರಧಾನ ವ್ಯವಸ್ಥಾಪಕ/ ಮುಖ್ಯ ಕಾರ್ಯನಿರ್ವಾಹಕನನ್ನು ತೆಗೆದುಹಾಕಿದ/ ವಜಾಮಾಡಿದ ಮೂರು ತಿಂಗಳೊಳಗಾಗಿ ಹೊಸ ಪ್ರಧಾನ ವ್ಯವಸ್ಥಾಪಕ/ ಮುಖ್ಯಕಾರ್ಯನಿರ್ವಾಹಕನನ್ನು ನೇಮಕಾತಿ ಮಾಡತಕ್ಕದ್ದು. |

| ಉಪ ವಿಧಿ ಸಂ. | ಹಾಲಿ ಇರುವ ಉಪವಿಧಿ | ಉಪ ವಿಧಿ ಸಂ. | ತಿದ್ದುಪಡಿಗೆ ಪ್ರಸ್ತಾಪಿಸಿದ ತಿದ್ದುಪಡಿ |
|---|---|---|---|
| 9 | ಸಾಮಾನ್ಯ ನಿಕಾಯದ, ಮಂಡಲಿಯ ಮತ್ತು ಉಪಸಮಿತಿಗಳ ಸಭೆಗಳಲ್ಲಿ ಹಾಜರಿದ್ದು, ಸದರಿ ಸಭೆಗಳಲ್ಲಿ ಅಗತ್ಯ ಪಡಿಸುವ ಕಾಗದ ಪತ್ರಗಳನ್ನು ಹಾಜರುಪಡಿಸತಕ್ಕದ್ದು ಮತ್ತು ಸಭಾಪತಿಯೊಡನೆ ಅಂತಹ ಸಭೆಗಳ ನಡೆವಳಿಗಳಿಗೆ ಸಭೆ ಮಾಡತಕ್ಕದ್ದು; | 9 | ಮಂಡಳಿಯು ಪ್ರಧಾನ ವ್ಯವಸ್ಥಾಪಕ/ ಮುಖ್ಯಕಾರ್ಯನಿರ್ವಾಹಕನಿಗೆ ಕಾಲಕಾಲಕ್ಕೆ ಒಪ್ಪಿಸಿಕೊಟ್ಟ / ನೀಡಿದ ಅಧಿಕಾರಗಳ ಜೊತೆಗೆ ಈ ಕೆಳಗಿನ ಕರ್ತವ್ಯಗಳೂ ಸೇರತಕ್ಕದ್ದು; ಅವನು,<br>ಸರ್ವಸಾಧಾರಣ, ಮಂಡಲಿಯ, ವ್ಯವಸ್ಥಾಪನಾ ಸಮಿತಿಯ, ಮತ್ತು ಉಪಸಮಿತಿಯ ಎಲ್ಲಾ ಸಭೆಗಳಿಗೆ ಹಾಜರಿರತಕ್ಕದ್ದು, ಹಾಗೂ ಅಂಥ ಸಭೆಗಳಿಗೆ ಅಗತ್ಯವಿರುವ ಎಲ್ಲಾ ಕಾಗದ ಪತ್ರಗಳನ್ನು ಹಾಗೂ ಮಾಹಿತಿಯನ್ನು ಹಾಜರು ಪಡಿಸತಕ್ಕದ್ದು ಮತ್ತು ಚೇರಮನ್‌ರೊಂದಿಗೆ ಅಂಥ ಸಭೆಯ ನಡುವಳಿಗಳಿಗೆ ಸಹಿ ಮಾಡತಕ್ಕದ್ದು; |
| (46) | ಬ್ಯಾಂಕಿನ ನೀತಿಗಳ, ಉದ್ದೇಶಗಳ ಮತ್ತು ಯೋಜನೆಯ ರಚನೆಯಲ್ಲಿ ಮಂಡಲಿಗೆ ಅಗತ್ಯ ನೆರವು ನೀಡುವುದು. | (46) | ಬ್ಯಾಂಕಿನ ನೀತಿಗಳನ್ನು, ಉದ್ದೇಶಗಳನ್ನು ಹಾಗೂ ಯೋಜನೆ ರೂಪಿಸಲು ಮಂಡಲಿ ಹಾಗೂ ವ್ಯವಸ್ಥಾಪನಾ ಸಮಿತಿಗೆ ಸಹಕರಿಸತಕ್ಕದ್ದು; |

## ಗ್ರಾಹಕರಿಗೆ ಒದಗಿಸುವ ಸೌಲಭ್ಯಗಳು

* ಬ್ಯಾಂಕಿನ ಮುಖ್ಯ ಕಛೇರಿ ಹಾಗೂ ಶಾಖೆಗಳಲ್ಲಿ ಆರ್.ಟಿ.ಜಿ.ಎಸ್. (RTGS) ಮತ್ತು ಎನ್.ಇ.ಎಫ್.ಟಿ. (NEFT) ಸೌಲಭ್ಯ ಕಲ್ಪಿಸಲಾಗಿದೆ.
* ಉಳಿತಾಯ, ಚಾಲ್ತಿ, ಓವರ್ ಡ್ರಾಫ್ಟ್ ಖಾತೆದಾರರಿಗೆ ರೂಪೆ ಎ.ಟಿ.ಎಂ. ಡೆಬಿಟ್ ಕಾರ್ಡ್‌ಗಳು (Insta Cards & Personalised Cards) ಲಭ್ಯವಿರುತ್ತವೆ. ಇದರಲ್ಲಿ ATM - POS - E com ಸೌಲಭ್ಯವಿರುತ್ತದೆ.
* ಸದಸ್ಯರ / ಗ್ರಾಹಕರ ವ್ಯವಹಾರದ ಅಭಿವೃದ್ಧಿಗೆ, ಗೃಹನಿರ್ಮಾಣ, ವಾಹನ ಸಾಲ, ಆಭರಣ ಸಾಲ ಇನ್ನೂ ಅನೇಕ ರೀತಿಯ ಸಾಲ ಸೌಲಭ್ಯಗಳು ಅತೀ ಕಡಿಮೆ ಬಡ್ಡಿ ದರದಲ್ಲಿ ಶೀಘ್ರವಾಗಿ ದೊರೆಯುತ್ತವೆ.
* ಗ್ರಾಹಕರ ಠೇವಣಾತಿಗಳ ಮೇಲೆ ಆಕರ್ಷಕ ಬಡ್ಡಿದರ, ಹಿರಿಯ ನಾಗರೀಕರಿಗೆ 0.50% ಹೆಚ್ಚಿನ ಬಡ್ಡಿದರ ನೀಡಲಾಗುವುದು
* ಈ-ಪೇಮೆಂಟ್ (ಟ್ಯಾಕ್ಸ್ ಇತರೆ) ಸೌಲಭ್ಯವಿರುತ್ತದೆ. ಗ್ರಾಹಕರು ಈ ಸೌಲಭ್ಯದ ಸದುಪಯೋಗ ಪಡೆದುಕೊಳ್ಳಲು ಕೋರಿದೆ.

**ಖಾತೆದಾರರು ಹಾಗೂ ಸದಸ್ಯರು ತಮ್ಮ ಬ್ಯಾಂಕಿನ ಖಾತೆಗಳಿಗೆ ಪಾನ್‌ಕಾರ್ಡ್, ಆಧಾರ್‌ಕಾರ್ಡ್ ಕೊಡುವುದು ಕಡ್ಡಾಯ ಮಾಡಲಾಗಿದೆ.**

## ಠೇವಣಾತಿಗಳ ಮೇಲಿನ ಬಡ್ಡಿದರ

| | | ಸಾಮಾನ್ಯ ಬಡ್ಡಿದರ | ಹಿರಿಯ ನಾಗರೀಕರಿಗೆ ಬಡ್ಡಿದರ |
|---|---|---|---|
| 15 ದಿನಗಳಿಂದ 90 ದಿನಗಳವರೆಗೆ | – | 3.50% | 3.50% |
| 91 ದಿನಗಳಿಂದ 180 ದಿನಗಳವರೆಗೆ | – | 4.50% | 4.50% |
| 181 ದಿನಗಳಿಂದ 1 ವರ್ಷದವರೆಗೆ | – | 5.50% | 5.50% |
| 1 ವರ್ಷದ ಮೇಲ್ಪಟ್ಟು 2 ವರ್ಷದವರೆಗೆ | – | 6.50% | 7.00% |
| 2 ವರ್ಷದ ಮೇಲ್ಪಟ್ಟು 3 ವರ್ಷದವರೆಗೆ | – | 6.75% | 7.25% |
| 3 ವರ್ಷದ ಮೇಲ್ಪಟ್ಟು | – | 6.50% | 7.00% |

**ವಿ.ಸೂ. : ಒಂದು ವರ್ಷದ ಮೇಲ್ಪಟ್ಟ ಠೇವಣಿ ಮೊತ್ತ ರೂ. 25.00 ಲಕ್ಷಕ್ಕೂ ಮೀರಿದರೆ (ಒಂದೇ ಖಾತೆಯಲ್ಲಿ) 0.50% ಹೆಚ್ಚಿಗೆ ಬಡ್ಡಿ ನೀಡಲಾಗುವುದು. ಹಿರಿಯ ನಾಗರೀಕರಿಗೆ ಸಿಗುವ ಹೆಚ್ಚಿಗೆ ಬಡ್ಡಿದರ ಈ ಖಾತೆಗಳಿಗೆ ಅನ್ವಯವಾಗುವುದಿಲ್ಲ.**

## ಸದಸ್ಯರ ಗಮನಕ್ಕೆ

* ಪ್ರತಿಯೊಬ್ಬ ಜಾಮೀನುದಾರರು ಸಾಲಗಾರರಷ್ಟೆ ತಾವು ಜಾಮೀನಾದ ಬ್ಯಾಂಕಿನ ಸಾಲದ ಮೊತ್ತಕ್ಕೆ ಜವಾಬ್ದಾರರಾಗಿರುತ್ತಾರೆ. ಸದಸ್ಯರು ಜಾಮೀನು ಆಗುವ ಪೂರ್ವದಲ್ಲಿ ಸಾಲಗಾರರ ಸಾಂಪತ್ತಿಕ ಸ್ಥಿತಿ, ಸಾಲದ ಉದ್ದೇಶ, ಸಾಲದ ಕಂತುಗಳನ್ನು ಪಾವತಿಸುವ ಶಕ್ತಿ, ಇವುಗಳ ಬಗ್ಗೆ ತಿಳಿದುಕೊಳ್ಳಲು ಹಾಗೂ ನಿಗದಿಯಾದ ಕಾಲಕ್ಕೆ ಸಾಲಗಾರನು ಕಂತುಗಳನ್ನು ಸರಿಯಾಗಿ ಕಟ್ಟುವಂತೆ ಮಾಡಿ ಸಹಕರಿಸಲು ಕೋರಿದೆ.
* ಆರ್.ಬಿ.ಐ. ನಿರ್ದೇಶನದ ಪ್ರಕಾರ ಸಿ–ಕೆ.ವೈ.ಸಿ. ಪದ್ಧತಿಯು ಜಾರಿಯಲ್ಲಿದ್ದು ಬ್ಯಾಂಕಿನ ಗ್ರಾಹಕರು ಯಾವುದೇ ಖಾತೆ / ಸದಸ್ಯತ್ವ ಹೊಂದಬೇಕಿದ್ದಲ್ಲಿ ಪಾನ್ ಅಥವಾ ಆಧಾರ್ ಕಾರ್ಡ್‌ನಲ್ಲಿರುವಂತೆಯೇ ತಮ್ಮ ಹೆಸರನ್ನು ನಮೂದಿಸಿ ಖಾತೆ / ಸದಸ್ಯತ್ವ ಪ್ರಾರಂಭಿಸತಕ್ಕದ್ದು ಹಾಗೂ ಹಾಲಿ ಇರುವ ಗ್ರಾಹಕರು ಕೂಡ ದಾಖಲಾತಿ ಒದಗಿಸಿ ಇದರಂತೆ ಸರಿಪಡಿಸಿಕೊಳ್ಳತಕ್ಕದ್ದು.
* ಬ್ಯಾಂಕಿನಿಂದ ತುರ್ತು ಸೇವೆಗಳನ್ನು ಪಡೆಯಲು ಮಾನ್ಯ ಸದಸ್ಯರು / ಗ್ರಾಹಕರು ತಮ್ಮ ಇಮೇಲ್ ಐಡಿಯನ್ನು ಕೂಡಲೇ ಒದಗಿಸಲು ಕೋರಿದೆ.
* ಡಿವಿಡೆಂಡ್ ಪಡೆಯಲು ವಿನಂತಿ :– ಮಾನ್ಯ ಸದಸ್ಯರು 2016–17ನೇ ಸಾಲಿನ ಡಿವಿಡೆಂಡನ್ನು ಈವರೆಗೂ ಪಡೆಯದೇ ಇದ್ದಲ್ಲಿ ದಿನಾಂಕ 31–03–2021 ರೊಳಗಾಗಿ ಪಡೆಯಲು ಸೂಚಿಸಿದೆ. ತಪ್ಪಿದ್ದಲ್ಲಿ 2016–17ನೇ ಸಾಲಿನ ಪಡೆಯದೇ ಇರುವ ಡಿವಿಡೆಂಡನ್ನು ಬ್ಯಾಂಕಿನ ಉಪವಿಧಿ ನಂ. 106ರ ಪ್ರಕಾರ ಮೀಸಲು ನಿಧಿಗೆ ವರ್ಗಾಯಿಸಲಾಗುವುದು.

**ಅತಿ ಕಡಿಮೆ ಬಡ್ಡಿ ದರದಲ್ಲಿ ಶೀಘ್ರವಾಗಿ ಸಾಲ ಸೌಲಭ್ಯಗಳು ದೊರೆಯುತ್ತವೆ.**
**ಮಾಹಿತಿಗಾಗಿ ನಮ್ಮ ಬ್ಯಾಂಕಿನ ಶಾಖೆಗಳಿಗೆ ಭೇಟಿ ಕೊಡಿ.**

**ಶೀಘ್ರ ಸೇವೆ – ಕಡಿಮೆ ಬಡ್ಡಿ**

# ಆಡಳಿತಾಧಿಕಾರಿಗಳು :



ಡಿ.ವಿ. ಆರಾಧ್ಯಮಠ
ಪ್ರಧಾನ ವ್ಯವಸ್ಥಾಪಕರು



ಬಿ.ಎಸ್. ಮಲ್ಲೇಶ್
ಉಪ ಪ್ರಧಾನ ವ್ಯವಸ್ಥಾಪಕರು



ಆರ್.ಎ. ಪ್ರಸನ್ನ
ವ್ಯವಸ್ಥಾಪಕರು
ಸಾಲವಿಭಾಗ, ಆಡಳಿತ ಕಛೇರಿ



ಹೆಚ್.ವಿ. ರುದ್ರೇಶ್
ವ್ಯವಸ್ಥಾಪಕರು
ಪ್ರಧಾನ ಕಛೇರಿ



ಜಿ.ಕೆ. ವಿಜಯಕುಮಾರ್
ವ್ಯವಸ್ಥಾಪಕರು
ಚೌಕಿಪೇಟೆ ಶಾಖೆ



ಎಲ್.ಎಸ್. ಗೀತ
ವ್ಯವಸ್ಥಾಪಕರು
ಪಿ.ಜೆ. ಬಡಾವಣೆ ಶಾಖೆ



ಕೆ.ಬಿ. ಸಾನಂದ ಗಣೇಶ್
ವ್ಯವಸ್ಥಾಪಕರು
ನರಸರಾಜ ರಸ್ತೆ ಶಾಖೆ



ಎಂ.ಎಂ. ಜಯಶೀಲ
ವ್ಯವಸ್ಥಾಪಕರು
ದೇವರಾಜ ಅರಸ್
ಬಡಾವಣೆ ಶಾಖೆ



ಹೆಚ್. ಕುಮಾರ್
ಪ್ರಭಾರ ವ್ಯವಸ್ಥಾಪಕರು
ಹೊನ್ನಾಳಿ ಶಾಖೆ



ಬಿ.ಎಸ್. ಪ್ರಶಾಂತ್
ಡಿ.ಬಿ.ಎ.
ಆಡಳಿತ ಕಛೇರಿ

## OUR BRANCHES

| | | | |
|---|---|---|---|
| Head Office (GM) | : 231155 | Chowkipet Branch | : 272543 |
| Head Office (Loans) | : 272540 | N.R. Road Branch | : 272544 / 49 |
| Head Office (Banking) | : 272541 | P.J. Extension Branch | : 272546 |
| Fax (08192) | : 230929 | Devaraj Urs Layout Branch | : 272547 |
| | | Honnali Branch (08188) | : 251905 |

## –: ಸಾಲಗಳ ಮೇಲಿನ ಬಡ್ಡಿ ದರದ ವಿವರಗಳು :–

| ಕ್ರ.ಸಂ. | ವಿ ವ ರ | ಬಡ್ಡಿ ದರ |
|---|---|---|
| 01 | ನೂತನ ಗೃಹ ನಿರ್ಮಾಣ ಮತ್ತು ಗೃಹ ಖರೀದಿ ಸಾಲ | 9% |
| 02 | ರೂ. 4.00 ಕೋಟಿ ಸಾಲಗಳಿಗೆ | 11% |
| 03 | ಸ್ಥಿರಾಸ್ತಿ ಆಧಾರಿತ ಓವರ್ ಡ್ರಾಫ್ಟ್ / ಕಂತು ಸಾಲ | 12% |
| 04 | ಆಧಾರ ರಹಿತ ಓ.ಡಿ., ಕಂತುಸಾಲ<br>(ಜಾಮೀನು ಆಧಾರದ ಸಾಲಗಳು) | 14% |
| 05 | ವೇತನ ಆಧಾರಿತ ಕಂತಿನ ಸಾಲ | 12% |
| 06 | ಬಂಗಾರದ ಆಭರಣ ಸಾಲ | 9% |
| 07 | ಮಾಲು ಆಧಾರದ ಸಾಲ | 13% |
| 08 | ಹೈಪಾಥಿಕೇಶನ್ ಸಾಲ | 12% |
| 09 | ಯಂತ್ರೋಪಕರಣ ಸಾಲ | 12% |
| 10 | ಕಾರು ಮತ್ತು ದ್ವಿಚಕ್ರ ವಾಹನ ಸಾಲ | 9% |
| 11 | ಬಸ್ಸು / ಲಾರಿ / ತ್ರಿಚಕ್ರ / ಕಾರುಗಳಿಗೆ – ವಾಣಿಜ್ಯೋಪಯೋಗಿ | 12% |
| 12 | ಸೆಕೆಂಡ್‌ಹ್ಯಾಂಡ್ ವಾಹನಗಳ ಸಾಲ | 13% |

*To,*


SINCE 1962
DAVANGERE
URBAN CO-OPERATIVE BANK LTD.

**THE DAVANGERE URBAN CO-OP BANK LTD.,**
Head Office : P.B. Road, Davangere - 577 002
E-mail : ducbank@yahoo.com   web : www.ducbank.com